
ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

11 ಮೇ 2026 ಸೋಮವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 61 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ರಾಯ್‌ಪುರದಲ್ಲಿ ಭಾನುವಾರ ಮುಂಬೈ ಇಂಡಿಯನ್ಸ್ ವಿರುದ್ಧ ನಡೆದ ಐಪಿಎಲ್ ಪಂದ್ಯದಲ್ಲಿ 4 ವಿಕೆಟ್ ಪಡೆದು ಸಂಭ್ರಮಿಸಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಭುವನೇಶ್ವರ್ ಕುಮಾರ್... ಮುಂಬೈ ಇಂಡಿಯನ್ಸ್ 166ಕ್ಕೆ 7.



ಕೂಸು ಹುಟ್ಟುವ ಮೊದಲೇ ಕುಲಾವಿ ಹೊಲಿದ ಗ್ರೆಗರ್ ಮೆಂಡಲ್ » 2


ಉರ್ವಿಲ್ ಪಟೇಲ್ ಸ್ಫೋಟಕ ಬ್ಯಾಟಿಂಗ್ » 3


ಭದ್ರಾ ಮೇಲ್ದಂಡೆ ಯೋಜನೆಗೆ ಸುಧಾಕರ್ ಹೆಸರಿಡಲು ಚಿಂತನೆ » 4


# ಬೆನ್ನಿಗೆ ಚೂರಿ ಹಾಕುವ ಬುದ್ಧಿ ಕಾಂಗ್ರೆಸ್‌ಗೆ ರಕ್ತಗತ

## ವಿಶ್ವಾಸಘಾತುಕ ಪಕ್ಷ ಕಿತ್ತೊಗೆಯಲು ಒಟ್ಟಾಗಿ: ಪ್ರಧಾನಿ ನರೇಂದ್ರ ಮೋದಿ ಕರೆ

• ಪ್ರಜೋದಯ ವರದಿ

**ಬೆಂಗಳೂರು:** ದೇಶವನ್ನು ವಿಕಾಸದತ್ತ ಕೊಂಡೊಯ್ಯಲು ವಿಶ್ವಾಸಘಾತುಕ ಕಾಂಗ್ರೆಸ್‌ನ್ನು ಕಿತ್ತೊಗೆಯಲು ಎಲ್ಲರೂ ಒಟ್ಟಾಗಬೇಕೆಂದು ಪ್ರಧಾನಿ ನರೇಂದ್ರ ಮೋದಿ ಅವರು ಕರೆ ನೀಡಿದರು.

ನಗರದ ಹೆಚ್‌ಎಎಲ್ ವಿಮಾನ ನಿಲ್ದಾಣದ ಆವರಣದಲ್ಲಿ ಭಾನುವಾರ ರಾಜ್ಯ ಬಿಜೆಪಿ ಘಟಕವು ಆಯೋಜಿಸಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಬೆನ್ನಿಗೆ ಚೂರಿ ಹಾಕುವ ಬುದ್ಧಿ ಕಾಂಗ್ರೆಸ್‌ಗೆ ರಕ್ತಗತವಾಗಿ ಬಂದಿದೆ. ಅಧಿಕಾರಕ್ಕಾಗಿ ಅದು ಏನು ಬೇಕಾದರೂ ಮಾಡುತ್ತದೆ ಎಂದು ಆರೋಪಿಸಿದರು.

2014ಕ್ಕೂ ಮುನ್ನ ಕಾಂಗ್ರೆಸ್ ಕೇಂದ್ರದಲ್ಲಿ 10 ವರ್ಷ ಅಧಿಕಾರದಲ್ಲಿ ಇದ್ದದ್ದು, ಡಿಎಂಕೆಯ ಬೆಂಬಲದ ಕಾರಣಕ್ಕೆ. ಕಾಂಗ್ರೆಸ್‌ನ ಕಷ್ಟಕಾಲದಲ್ಲಿ ಡಿಎಂಕೆ ಅದರ ಜೊತೆಗಿತ್ತು. ಆದರೆ, ಈಗ ಡಿಎಂಕೆ ಅಧಿಕಾರದಲ್ಲಿ ಇಲ್ಲವೆಂದ ಮಾತ್ರಕ್ಕೆ ಅದರ ಬೆನ್ನಿಗೆ ಕಾಂಗ್ರೆಸ್ ಚೂರಿ ಹಾಕಿದೆ. ಹೊಸ ಪಕ್ಷದ ಬೆನ್ನೇರಿದೆ. ಅದರ ಬೆನ್ನಿಗೂ ಕಾಂಗ್ರೆಸ್ ಚೂರಿ ಹಾಕುವ ಕಾಲ ದೂರವಿಲ್ಲ ಎಂದರು.

ಕಾಂಗ್ರೆಸ್ ಕೇವಲ ಅದರ ಮಿತ್ರ ಪಕ್ಷಗಳಿಗೆ ಚೂರಿ ಹಾಕಿಲ್ಲ. ದೇಶದ ಮಹಿಳೆಯರಿಗೂ ದ್ರೋಹ ಬಗೆದಿದೆ. ಮಹಿಳಾ ಮೀಸಲಾತಿ ಮಸೂದೆ ತರುವುದು, ಅದರ ವಿರುದ್ಧ ತನ್ನ ಮಿತ್ರಪಕ್ಷಗಳಿಂದಲೇ ಮತ ಹಾಕಿಸುವುದು ಮಾಡುತ್ತಿತ್ತು. ನಾವು ಕಷ್ಟಪಟ್ಟು ಕಾನೂನು ತಂದೆವು. ಕಾಂಗ್ರೆಸ್ ಅದನ್ನು ಸೋಲಿಸಿತು. ಇಂತಹ ವಿಶ್ವಾಸದ್ರೋಹಿ ಕಾಂಗ್ರೆಸ್ ಅನ್ನು ಸೋಲಿಸಬೇಕೆಂದು ಕರೆ ನೀಡಿದರು.

ನಮ್ಮ ಆಡಳಿತ ಹೇಗಿದೆ ಅಂದರೆ, ನಾವು ಒಮ್ಮೆ ಸರ್ಕಾರ ರಚಿಸಿದರೆ ಜನರೇ ಎರಡನೇ ಬಾರಿ, ಮೂರನೇ ಬಾರಿ ಅಧಿಕಾರ ನೀಡುತ್ತಾರೆ. ಅಸ್ಸಾಂ, ಪುದುಚೇರಿಯಲ್ಲಿ ಇದೇ ಆಗಿದೆ. ಪಶ್ಚಿಮ ಬಂಗಾಳದಲ್ಲಿ 10 ವರ್ಷಗಳ ಹಿಂದೆ ನಮ್ಮ ಮೂವರು ಶಾಸಕರಷ್ಟೇ ಇದ್ದರು. ಈಗ 203 ಶಾಸಕರೊಂದಿಗೆ ಸರ್ಕಾರ ರಚಿಸಿದ್ದೇವೆ. ಕೇರಳದಲ್ಲಿ ಈಗ ಮೂವರು ಶಾಸಕರಿದ್ದೇವೆ. ಅಲ್ಲಿಯೂ ಪೂರ್ಣ ಬಹುಮತದೊಂದಿಗೆ ಸರ್ಕಾರ ರಚಿಸುವ ದಿನ ದೂರವಿಲ್ಲ. ಲೋಕಸಭಾ ಸದಸ್ಯರ ಸಂಖ್ಯೆಯಲ್ಲಿ, ಕರ್ನಾಟಕದಲ್ಲಿ ನಮ್ಮದೇ ದೊಡ್ಡ ಪಕ್ಷ ಎಂಬುದನ್ನು ಮರೆಯುವಂತಿಲ್ಲ ಎಂದರು.

ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಮಾತನಾಡಿ, ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಕಾರ್ಯಕರ್ತರು ಬಿಜೆಪಿಯನ್ನು ಅಧಿಕಾರಕ್ಕೆ ತಂದಂತೆ, ಕರ್ನಾಟಕ ದಲ್ಲೂ ಕಾಂಗ್ರೆಸ್ ಸರ್ಕಾರವನ್ನು ಕಿತ್ತೊಗೆದು ಬಿಜೆಪಿಯನ್ನು ಅಧಿಕಾರಕ್ಕೆ ತರುತ್ತೇವೆಂದು ಮೋದಿ ಅವರಿಗೆ ಭರವಸೆ ನೀಡುತ್ತೇವೆಂದು ಹೇಳಿದರು.

ದೇಶದ ಜನರು ಈಗ ವೇಗದ ಅಭಿವೃದ್ಧಿ ಮತ್ತು ಪರಿಹಾರ ಬಯಸುತ್ತಿದ್ದಾರೆ. ಜನರಿಗೆ ಈಗ ಭ್ರಷ್ಟಾಚಾರ ಬೇಡ, ವೇಗ ಬೇಕಿದೆ. ಜನರಿಗೆ ಸಮಸ್ಯೆಗಳ ಪರಿಹಾರ ಬೇಕು. ರಾಷ್ಟ್ರದ ಹಿತಾಸಕ್ತಿಯ ಆಧಾರದ ಮೇಲೆ ರಾಜಕೀಯ ಬೇಕು. ಬಿಜೆಪಿ ಮತ್ತು ಎನ್‌ಡಿಎ ಮೈತ್ರಿಯ ಆಡಳಿತ ಮಾದರಿಯ ಮೇಲಿನ ಜನರ ವಿಶ್ವಾಸ ಹೆಚ್ಚುತ್ತಿದೆ. ಬಿಜೆಪಿ ಸಣ್ಣ ಪಕ್ಷವಾಗಿದ್ದ ಕಾಲದಲ್ಲಿಯೇ ಕರ್ನಾಟಕ ನಮಗೆ ಅಪಾರ ಶಕ್ತಿ ನೀಡಿತ್ತು. ಇಂದು ಬೆಂಗಳೂರಿನ ನೆಲದಿಂದ ಕೇಸರಿ ಬಣ್ಣದ ಸೂರ್ಯ ಉದಯಿಸಿರುವುದನ್ನು ನಾನು ಕಾಣುತ್ತಿದ್ದೇನೆ ಎಂದು ಹೇಳಿದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಕೇಂದ್ರ ಸಚಿವ ಪ್ರಲ್ಹಾದ ಜೋಷಿ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಸಂಸದ ಬಸವರಾಜ ಬೊಮ್ಮಾಯಿ ಉಪಸ್ಥಿತರಿದ್ದರು.



> **ಜನರ ಸಮಸ್ಯೆ ಪರಿಹರಿಸುವ ಬದಲು ಕಾಂಗ್ರೆಸ್ ಸರ್ಕಾರ, ಕಳೆದ ಮೂರು ವರ್ಷಗಳಿಂದ ಒಳಜಗಳ ಬಗೆಹರಿಸುವಲ್ಲೇ ಸಮಯ ಕಳೆಯುತ್ತಿದೆ. ಮುಖ್ಯಮಂತ್ರಿ ಎಷ್ಟು ದಿನ ಹುದ್ದೆಯಲ್ಲಿ ಇರುತ್ತಾರೆ ಎಂಬುದನ್ನೂ ಕಾಂಗ್ರೆಸ್ ನಿರ್ಧರಿಸಲಾಗುತ್ತಿಲ್ಲ. ಮತ್ತೊಬ್ಬರಿಗೆ ಅವಕಾಶ ಸಿಗುತ್ತದೆಯೋ ಇಲ್ಲವೋ ಎಂಬುದೂ ಸ್ಪಷ್ಟವಿಲ್ಲ. ಎಲ್ಲವೂ ತೂಗು ಹಗ್ಗದಲ್ಲಿ ಸಿಲುಕಿದೆ.**
> **-ನರೇಂದ್ರ ಮೋದಿ, ಪ್ರಧಾನ ಮಂತ್ರಿ**

### ಪ್ರಧಾನಿ ತೆರಳುವ ಮಾರ್ಗದಲ್ಲಿ ಜಿಲೆಟಿನ್ ಕಡ್ಡಿ ಪತ್ತೆ

ಪ್ರಧಾನಿ ಮೋದಿ ತೆರಳುವ ಮಾರ್ಗದಲ್ಲಿ ಜಿಲೆಟಿನ್ ಕಡ್ಡಿ ಪತ್ತೆಯಾಗಿದ್ದು, ಬೆಂಗಳೂರು ನಗರ ಹಾಗು ರಾಮನಗರದ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ಒಬ್ಬನನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಕೋರಮಂಗಲದ ಮನೆಯೊಂದರ ಅಡಗಿದ್ದ ವ್ಯಕ್ತಿಯನ್ನು ವಶಕ್ಕೆ ಪಡೆಯಲಾಗಿದೆ. ಕಗ್ಗಲೀಪುರದ ತಾತಗುಣಿ ಎಂಬಲ್ಲಿ ಜಿಲೆಟಿನ್ ಕಡ್ಡಿ ಪತ್ತೆಯಾಗಿದ್ದವು. ಅನುಮಾನಾಸ್ಪದ ಬ್ಯಾಗ್ ಕಂಡುಬಂದ ಹಿನ್ನಲೆ ಅದನ್ನು ವಶಕ್ಕೆ ಪಡೆದು ಪರಿಶೀಲನೆ ನಡೆಸಿದಾಗ ಅದರಲ್ಲಿ ಜಿಲೆಟಿನ್ ಕಡ್ಡಿ ಇರುವುದು ಪತ್ತೆ ಆಗಿತ್ತು ಎಂದು ಮೂಲಗಳು ಹೇಳಿವೆ. ನರೇಂದ್ರ ಮೋದಿ ಅವರು ರಸ್ತೆಯ ಮಾರ್ಗವಾಗಿ ಹೆಚ್‌ಎಎಲ್‌ಗೆ ತೆರಳಿ ಅಲ್ಲಿಂದ ಹೈದರಾಬಾದ್‌ಗೆ ತೆರಳಬೇಕಿತ್ತು.

# ಸಚಿವ ಡಿ.ಸುಧಾಕರ್ ನಿಧನ : ಇಂದು ಅಂತ್ಯಕ್ರಿಯೆ

■ ರಾಜ್ಯಾದ್ಯಂತ 3 ದಿನ ಶೋಕಾಚರಣೆ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯದ ಯೋಜನೆ ಮತ್ತು ಸಾಂಖಿಕ ಇಲಾಖೆ ಸಚಿವ, ಹಿರಿಯೂರು ಕ್ಷೇತ್ರದ ಶಾಸಕ ಡಿ. ಸುಧಾಕರ್ (66) ಅವರು ಭಾನುವಾರ ನಸುಕಿನ ಜಾವ ನಿಧನರಾಗಿದ್ದಾರೆ. ಹಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಸಚಿವ ಡಿ. ಸುಧಾಕರ್ ಅವರು ಬೆಂಗಳೂರಿನ ಕಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಚಿಕಿತ್ಸೆ ಫಲಕಾರಿಯಾಗದೆ ಬೆಳಗಿನ ಜಾವ 3:15ರ ಸುಮಾರಿಗೆ ನಿಧನರಾಗಿದ್ದಾರೆ.

ಮೊಣಕಾಲು ಶಸ್ತ್ರಚಿಕಿತ್ಸೆ ಸಂಬಂಧ ಸಚಿವ ಸುಧಾಕರ್ ಅವರು ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ದಾಖಲಾಗಿದ್ದರು. ಆದರೆ, ಶಸ್ತ್ರಚಿಕಿತ್ಸೆ ನಂತರ ಶ್ವಾಸಕೋಶದಲ್ಲಿ ಸೋಂಕು ಕಾಣಿಸಿಕೊಂಡು ಆರೋಗ್ಯ ಸ್ಥಿತಿ ಚಿಂತಾಜನಕವಾಗಿತ್ತು. ಬಳಿಕ ಅವರನ್ನು ಮಣಿಪಾಲ್ ಆಸ್ಪತ್ರೆಯಿಂದ ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಕಿಮ್ಸ್ ಆಸ್ಪತ್ರೆಗೆ ಶಿಫ್ಟ್ ಮಾಡಲಾಗಿತ್ತು.

ಸಚಿವ ಡಿ.ಸುಧಾಕರ್ ನಿಧನಕ್ಕೆ ರಾಜ್ಯ ಸರ್ಕಾರ ಸಂತಾಪ ಸೂಚಿಸಿದ್ದು, ಚಿತ್ರದುರ್ಗಕ್ಕೆ ಅನ್ವಯವಾಗುವಂತೆ ಸೋಮವಾರ ಸರ್ಕಾರಿ ರಜೆ ಘೋಷಣೆ ಮಾಡಿದೆ. ಜೊತೆಗೆ 3 ದಿನ ರಾಜ್ಯಾದ್ಯಂತ ಶೋಕಾಚರಣೆಯನ್ನೂ ಘೋಷಿಸಿದೆ.

ಸದಾಶಿವ ನಗರದ ನಿವಾಸದಲ್ಲಿ ಸಚಿವ ಡಿ.ಸುಧಾಕರ್ ಅವರ ಅಂತಿಮ ದರ್ಶನ ಪಡೆದ ಬಳಿಕ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಯ್ಯ ಅವರು, ಮಂಗಳವಾರ ಚಳ್ಳಕೆರೆಯಲ್ಲಿ ಸಂಜೆ 4 ಗಂಟೆಗೆ ಸಕಲ ಸರ್ಕಾರಿ ಗೌರವ ದೊಂದಿಗೆ ಅವರ ಅಂತ್ಯಕ್ರಿಯೆ ನಡೆಯಲಿದೆ. ಸಚಿವ ಸುಧಾಕರ್ ಅವರ ಅಗಲಿಕೆಯಿಂದ ರಾಜಕೀಯ ಕ್ಷೇತ್ರಕ್ಕೆ ಬಹುದೊಡ್ಡ ನಷ್ಟವುಂಟಾಗಿದೆ ಎಂದು ಹೇಳಿದರು.

ಸುಧಾಕರ್ ಅವರು ಮೂಲತಃ ಚಳ್ಳಕರೆಯವರು. 2008ರಿಂದ ಹಿರಿಯೂರು ಶಾಸಕರಾಗಿದ್ದರು. ಎರಡನೇ ಬಾರಿಗೆ ಮಂತ್ರಿಯಾಗಿದ್ದ ಅವರು ಅತ್ಯಂತ ಜನಪ್ರಿಯ ವ್ಯಕ್ತಿಯಾಗಿದ್ದರು. ಸಮಾಜ ಕಲ್ಯಾಣ ಸಚಿವರಾಗಿಯೂ ಕೆಲಸ ಮಾಡಿದ್ದಾರೆ. ಸಹಕಾರ ಕ್ಷೇತ್ರದಲ್ಲಿಯೂ ಸಾಕಷ್ಟು ಕೊಡುಗೆ ನೀಡಿರುವ ಅವರು, ಡಿಸಿಸಿ ಬ್ಯಾಂಕ್ ಅಧ್ಯಕ್ಷರೂ ಆಗಿದ್ದರು. ಅಪೆಕ್ಸ್ ಬ್ಯಾಂಕ್ ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸಿದ್ದರು. ಸುಧಾಕರ್ ಅವರ ಚಿಕ್ಕಪ್ಪ ಜಯಣ್ಣ ಕೂಡಾ ಶಾಸಕರಾಗಿದ್ದವರು. ರಾಜಕೀಯ ಕ್ಷೇತ್ರದಲ್ಲಿ ಅಪಾರ ಜನಪ್ರಿಯತೆ ಗಳಿಸಿಕೊಂಡಿದ್ದರು. ಚಳ್ಳಕೆರೆ ಎಸ್.ಟಿ ಮೀಸಲು ಕ್ಷೇತ್ರವಾಗಿದ್ದರಿಂದ ಹಿರಿಯೂರಿನಿಂದ ಸ್ಪರ್ಧಿಸಿ ಗೆದ್ದಿದ್ದರು, ರೈತರ ಹಾಗು ಬಡವರ ಪರವಾಗಿ ಸಾಕಷ್ಟು ಕೆಲಸ ಮಾಡಿದ್ದು, ಬಡವರ ಬಂಧು ಎಂದೇ ಖ್ಯಾತರಾಗಿದ್ದರು. ಸುಧಾಕರ್ ಅವರು ಪತ್ನಿ, ಪುತ್ರಿ ಹಾಗು ಪುತ್ರ ಸೇರಿ ಅಪಾರ ಬಂಧು ಬಳಗ, ಅಭಿಮಾನಿಗಳನ್ನು ಅಗಲಿದ್ದಾರೆ.





## ಕಾರು ಅಪಘಾತ : ಯುವಕ ಸಾವು

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಚಾಲಕನ ನಿಯಂತ್ರಣ ತಪ್ಪಿ ಡಿವೈಡರ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಯುವಕನೊಬ್ಬ ಮೃತಪಟ್ಟು, ಮೂವರು ಗಾಯಗೊಂಡಿರುವ ಘಟನೆ ತಾಲ್ಲೂಕಿನ ನುಗ್ಗೇಹಳ್ಳಿ ಕ್ರಾಸ್ ಬಳಿ ನಡೆದಿದೆ. ತಾಲ್ಲೂಕಿನ ಡಿ.ಕಾಳೇನಹಳ್ಳೀ ಗ್ರಾಮದ ಮನೋಜ್ (22) ಮೃತ. ರಮೇಶ, ಮನು, ಅಕಾಶ ಗಾಯಗೊಂಡಿದ್ದಾರೆ.

ಸ್ನೇಹಿತರ ಮನೆಗೆ ಹೋಗಲು ಕಾರಿನಲ್ಲಿ ನುಗ್ಗೇಹಳ್ಳಿ ಕ್ರಾಸ್ ಬಳಿ ತೆರಳುತ್ತಿದ್ದ ವೇಳೆ ಕಾರು ಚಾಲನೆ ಮಾಡುತ್ತಿದ್ದ ಕುಶಾಲ ಅವರ ನಿಯಂತ್ರಣ ತಪ್ಪಿ, ರಸ್ತೆಯ ಡಿವೈಡರ್‌ಗೆ ಡಿಕ್ಕಿ ಮಾಡಿ ಪರಿಣಾಮ ಕಾರು ಮಗುಚಿಕೊಂಡು ಉರುಳಿ ಬಿದ್ದಿದೆ. ಕಾರಿನಲ್ಲಿದ್ದ ರಮೇಶ್, ಆಕಾಶ, ಮನು, ಮನೋಜ ಮತ್ತು ಚಾಲಕ ಕುಶಾಲ ಅವರಿಗೆ ಪೆಟ್ಟಾಗಿದೆ. ಆದರೆ, ಗಂಭೀರವಾಗಿ ಗಾಯಗೊಂಡಿದ್ದ ಮನೋಜ್ ಆಸ್ಪತ್ರೆಗೆ ದಾಖಲಿಸುವ ಮಾರ್ಗ ಮಧ್ಯೆ ಮೃತಪಟ್ಟಿದ್ದಾರೆ. ಪಟ್ಟಣ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ರಾಷ್ಟ್ರವ್ಯಾಪಿ ಮುಷ್ಕರಕ್ಕೆ ಎಸ್‌ಬಿಐ ನೌಕರರ ಕರೆ

• ಪ್ರಜೋದಯ ವರದಿ

**ಹಾಸನ :** ದೇಶದ ಅತಿದೊಡ್ಡ ಸಾರ್ವಜನಿಕ ವಲಯದ ಬ್ಯಾಂಕಾದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ದಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ಹಲವು ವರ್ಷಗಳ ನ್ಯಾಯ ಸಮ್ಮತ ಬೇಡಿಕೆಗಳನ್ನು ಈಡೇರಿಸುವಲ್ಲಿ ಬ್ಯಾಂಕ್ ನಿರ್ವಹಣೆ ವಿಫಲವಾ ಗಿದೆ ಎಂದು ಆರೋಪಿಸಿ ಆಲ್ ಇಂಡಿಯಾ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಸ್ಟಾಫ್ ಫೆಡರೇಷನ್ ಮೇ 25 ಮತ್ತು 26ರಂದು ರಾಷ್ಟ್ರವ್ಯಾಪಿ ಮುಷ್ಕರಕ್ಕೆ ಕರೆ ನೀಡಿದೆ.

ಹಲವು ವರ್ಷಗಳಿಂದ ಸಂಘಟನೆ ಶಾಂತಿಯುತ ಹಾಗು ರಚನಾತ್ಮಕ ಹೋರಾಟದ ಮಾರ್ಗವನ್ನು ಅನುಸರಿಸಿಕೊಂಡು ನಿರಂತರ ಮಾತುಕತೆ, ಮನವೊಲಿಕೆ ಮತ್ತು ಸಂವಾದದ ಮೂಲಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಪ್ರಯತ್ನಿಸಲಾಗಿದೆ. ಆದರೆ, ನೌಕರರ ಪ್ರಮುಖ ಬೇಡಿಕೆಗಳ ಕುರಿತು ಎಸ್‌ಬಿಐ ನಿರ್ವಹಣೆ ನಿರ್ಲಕ್ಷ್ಯ ಧೋರಣೆ ತಾಳಿದ್ದು, ಯಾವುದೇ ಸ್ಪಷ್ಟ ಹಾಗು ತೃಪ್ತಿಕರ ಕ್ರಮ ಕೈಗೊಂಡಿಲ್ಲವೆಂದು ಅಸಮಾಧಾನ ವ್ಯಕ್ತಪಡಿಸಿದರು.

ಬ್ಯಾಂಕ್‌ನಲ್ಲಿ ಸಿಬ್ಬಂದಿ ಕೊರತೆ ಹೆಚ್ಚುತ್ತಿದ್ದು, ಕೆಲಸದ ಒತ್ತಡ ತೀವ್ರವಾಗುತ್ತಿದೆ. ಗ್ರಾಮೀಣ ಹಾಗು ನಗರ ಪ್ರದೇಶಗಳ ಹಲವು ಶಾಖೆಗಳಲ್ಲಿ ಕನಿಷ್ಠ ಅಗತ್ಯ ಸಿಬ್ಬಂದಿಯೇ

» ನಾಲ್ಕನೇ ಪುಟದಲ್ಲಿ

# ಜಿಲ್ಲೆಯಲ್ಲಿರುವ ಅರ್ಧದಷ್ಟು ಕೆರೆಗಳು ಒತ್ತುವರಿ

## ಒಟ್ಟು 6,861 ಕೆರೆಗಳ ಪೈಕಿ 2,930 ಕೆರೆಗಳು ವಿವಿಧ ರೀತಿಯ ಅತಿಕ್ರಮಣ

**ಕೆ.ಪಿ.ಸಾಗರ್ ರಾಜು**

• ಪ್ರಜೋದಯ ವರದಿ

**ಹಾಸನ:** ರಾಜ್ಯದಲ್ಲೇ ಹೆಚ್ಚು ಕೆರೆಗಳನ್ನು ಹೊಂದಿರುವ ಜಿಲ್ಲೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಜಿಲ್ಲೆಯ ಅರ್ಧದಷ್ಟು ಕೆರೆಗಳು ಒತ್ತುವರಿಯಾಗಿವೆ. ಕಾಲು ಭಾಗದಷ್ಟು ಮಾತ್ರ ಕೆರೆಗಳ ಒತ್ತುವರಿ ತೆರವುಗೊಳಿಸುವ ಕಾರ್ಯ ನಡೆದಿದೆ.

ಜಿಲ್ಲೆಯಲ್ಲಿ ಒಟ್ಟು 6,861 ಕೆರೆಗಳು ದಾಖಲಾಗಿದ್ದು, ಅವುಗಳ ಪೈಕಿ 2,930 ಕೆರೆಗಳು ವಿವಿಧ ರೀತಿಯ ಒತ್ತುವರಿಗೆ ಒಳಪಟ್ಟಿರುವುದು ಅಧಿಕೃತ ದಾಖಲೆಗಳಿಂದ ಬಹಿರಂಗವಾಗಿದೆ. ಈ ಪೈಕಿ 1,251 ಕೆರೆಗಳಲ್ಲಿ ಈಗಾಗಲೇ ಒತ್ತುವರಿ ತೆರವು ಕಾರ್ಯಾಚರಣೆ ಕೈಗೊಳ್ಳಲಾಗಿದೆ. ಕೆರೆಗಳ ಅಸ್ತಿತ್ವಕ್ಕೆ ಭೀತಿ ಉಂಟು ಮಾಡಿದ್ದ ಅಕ್ರಮ ಕೃಷಿ, ಮನೆ ನಿರ್ಮಾಣ, ವಾಣಿಜ್ಯ ಬಳಕೆ ಮತ್ತು ಮಣ್ಣಿನ ಅತಿಕ್ರಮಣಗಳನ್ನು ತೆರವುಗೊಳಿಸುವ ಕಾರ್ಯಕ್ಕೆ ಜಿಲ್ಲಾಡಳಿತ ಆದ್ಯತೆ ನೀಡಿದೆ.

ಕೆರೆಗಳ ಮೂಲ ವ್ಯಾಪ್ತಿಯನ್ನು ನಿಖರವಾಗಿ ಗುರುತಿಸಲು ಜಿಲ್ಲಾಡಳಿತ ಕ್ಯೂಜಿಐಎಸ್ ತಂತ್ರಜ್ಞಾನವನ್ನು ಬಳಸಿಕೊಂಡು ಡಿಜಿಟಲ್ ಮ್ಯಾಪಿಂಗ್ ಕಾರ್ಯ ಆರಂಭಿಸಿದೆ. ಈಗಾಗಲೇ 6,783 ಕೆರೆಗಳ ಮ್ಯಾಪಿಂಗ್ ಪೂರ್ಣಗೊಂಡಿದ್ದು, ಇದರಿಂದ ಕೆರೆಗಳ ಮೂಲ ಗಡಿ, ಫೀಡರ್ ಕಾಲುವೆಗಳು, ನೀರಿನ ಹರಿವು ಮಾರ್ಗಗಳು ಹಾಗು ಅಕ್ರಮ ಒತ್ತುವರಿ ಪ್ರದೇಶಗಳನ್ನು ಸ್ಪಷ್ಟವಾಗಿ ಗುರುತಿಸಲು ಸಾಧ್ಯವಾಗಿದೆ.

ಹಿಂದೆ ದಾಖಲೆಗಳ ಕೊರತೆ, ಹಳೆಯ ಸರ್ವೆ ನಕ್ಷೆಗಳ ಅಸ್ಪಷ್ಟತೆ ಮತ್ತು ಗಡಿ ವಿವಾದಗಳಿಂದ ಒತ್ತುವರಿ ತೆರವು ಕಾರ್ಯ ವಿಳಂಬವಾಗುತ್ತಿತ್ತು. ಆದರೆ, ಉಪಗ್ರಹ ಚಿತ್ರಗಳು ಮತ್ತು ಕ್ಯೂಜಿಐಎಸ್ ಆಧಾರಿತ ನಕ್ಷೆಗಳ ಬಳಕೆ ಆಡಳಿತಕ್ಕೆ ಹೆಚ್ಚು ನಿಖರ ಮಾಹಿತಿ ಒದಗಿಸಿದೆ. ಇದರಿಂದ ನ್ಯಾಯಾಂಗ ವ್ಯಾಜ್ಯಗಳಲ್ಲಿಯೂ ಸರ್ಕಾರದ ವಾದ ಬಲಪಡುತ್ತಿದೆ.

**ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲೇ ಹೆಚ್ಚು ಕೆರೆಗಳು**

ಇಲಾಖಾವಾರು ಅಂಕಿ-ಅಂಶಗಳು ಜಿಲ್ಲೆಯ ಕೆರೆ ನಿರ್ವಹಣೆಯ ವಾಸ್ತವ ಚಿತ್ರಣ ನೀಡುತ್ತವೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಯಲ್ಲೇ ಅತೀ ಹೆಚ್ಚು 6,376 ಕೆರೆಗಳಿವೆ. ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ 168 ಕೆರೆಗಳು ಮತ್ತು ಜಲ ಸಂಪನ್ಮೂಲ ಇಲಾಖೆಯ ವ್ಯಾಪ್ತಿಯಲ್ಲಿ 317 ಕೆರೆಗಳು ಸೇರಿವೆ.


ಬಹುತೇಕ ಕೆರೆಗಳು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಇರುವುದರಿಂದ ಅವುಗಳ ನಿರ್ವಹಣೆ ಸ್ಥಳೀಯ ಆಡಳಿತದ ಹೊಣೆಗಾರಿಕೆಯಾಗುತ್ತದೆ. ಆದರೆ, ಸಿಬ್ಬಂದಿ ಕೊರತೆ, ಅನುದಾನದ ಅಭಾವ ಮತ್ತು ಜನಸಹಭಾಗಿತ್ವದ ಕುಂಠಿತತೆ ಕಾರಣದಿಂದ ಅನೇಕ ಕೆರೆಗಳು ವರ್ಷಗಳಿಂದ ನಿರ್ಲಕ್ಷ್ಯಕ್ಕೆ ಒಳಗಾಗಿವೆ.

**ನೀರಿನ ಭದ್ರತೆಗೆ ಕೆರೆಗಳೇ ಜೀವನಾಡಿ**

ಮಲೆನಾಡು, ಅರೆಮಲೆನಾಡು, ಬಯಲು ಸೀಮೆ ಪ್ರದೇಶಗಳನ್ನು ಒಳಗೊಂಡಿರುವ ಜಿಲ್ಲೆಯಲ್ಲಿ ಮಳೆಯ ಪ್ರಮಾಣ ಉತ್ತಮವಾಗಿದ್ದರೂ, ಇತ್ತೀಚಿನ ವರ್ಷಗಳಲ್ಲಿ ಹವಾಮಾನ ವೈಪರೀತ್ಯ ಮತ್ತು ಅಸಮರ್ಪಕ ನೀರು ನಿರ್ವಹಣೆಯಿಂದ ಹಲವೆಡೆ ನೀರಿನ ಕೊರತೆ ಕಂಡು ಬರುತ್ತಿದೆ. ಕೆರೆಗಳು ಕೇವಲ ನೀರಿನ ಸಂಗ್ರಹಣಾ ಕೇಂದ್ರಗಳಾಗದೆ, ಅಂತರ್ಜಲ ವೃದ್ಧಿ, ಪರಿಸರ ಸಮತೋಲನ ಮತ್ತು ಕೃಷಿ ಆರ್ಥಿಕತೆಯ ಪ್ರಮುಖ ಅಂಶಗಳಾಗಿವೆ.

**ಒತ್ತುವರಿ ತೆರವಿಗೆ ಸವಾಲು**

ಕೆಲವೆಡೆ ಕೆರೆ ಒತ್ತುವರಿ ತೆರವು ಕಾರ್ಯಾಚರಣೆಗೆ ವಿರೋಧವೂ ವ್ಯಕ್ತವಾಗುತ್ತಿದೆ. ಹಲವು ವರ್ಷಗಳಿಂದ ಕೆರೆ ಜಾಗವನ್ನು ಕೃಷಿ ಅಥವಾ ವಾಸಸ್ಥಳವಾಗಿ ಬಳಸಿಕೊಂಡಿದ್ದವರು ತೆರವು ಕಾರ್ಯಕ್ಕೆ ಆಕ್ಷೇಪ ವ್ಯಕ್ತಪಡಿಸುತ್ತಿದ್ದಾರೆ. ಆದಾಗ್ಯೂ, ಸಾರ್ವಜನಿಕ ಆಸ್ತಿ ಮತ್ತು ನೀರಿನ ಮೂಲಗಳ ರಕ್ಷಣೆಗೆ ಸರ್ಕಾರ ಕಟ್ಟುನಿಟ್ಟಿನ ಕ್ರಮ ಮುಂದುವರಿಸಿದೆ. ಕೆರೆಗಳ ಹೂಳೆತ್ತುವಿಕೆ, ಕಾಲುವೆಗಳ ಸ್ವಚ್ಛತೆ, ಗಡಿ ಕಲ್ಲು ಅಳವಡಿಕೆ ಹಾಗು ಮಳೆ ನೀರಿನ ಸಂಗ್ರಹ ಸಾಮರ್ಥ್ಯ ಹೆಚ್ಚಿಸುವ ಕಾರ್ಯಗಳಿಗೆ ಜಿಲ್ಲಾಡಳಿತ ಯೋಜನೆ ರೂಪಿಸಿದೆ. ಪರಿಸರ ವಾದಿಗಳು, ರೈತ ಸಂಘಟನೆಗಳು, ಸ್ಥಳೀಯ ಸಂಸ್ಥೆಗಳು ಕೆರೆಗಳ ಉಳಿವಿಗೆ ಒಟ್ಟಾಗಿ ಕಾರ್ಯ ನಿರ್ವಹಿಸುವ ಅಗತ್ಯವಿದೆ. ಕೆರೆಗಳ ಉಳಿವು ಭವಿಷ್ಯದ ನೀರಿನ ಭದ್ರತೆ, ಕೃಷಿ ಮತ್ತು ಗ್ರಾಮೀಣ ಜೀವನದ ಉಳಿವಿನ ಪ್ರಶ್ನೆಯಾಗಿದೆ. ಈ ನಿಟ್ಟಿನಲ್ಲಿ ಕೆರೆ ಒತ್ತವರಿ ಕಾರ್ಯಾಚರಣೆ ವೇಗವಾಗಿ ನಡೆಯುತ್ತಿದೆ.



**(ಇಲಾಖೆವಾರು ಕೆರೆಗಳ ಮಾಹಿತಿ)**
ಪಂಚಾಯತ್ ರಾಜ್ ಇಲಾಖೆ- 6,376
ಸಣ್ಣ ನೀರಾವರಿ ಇಲಾಖೆ -168 ಕೆರೆಗಳು
ಜಲ ಸಂಪನ್ಮೂಲ ಇಲಾಖೆ -317
ಒಟ್ಟು ಕೆರೆಗಳು-6861

### ಹೈಕೋರ್ಟ್ ಸೂಚನೆಯಿಂದ ಕ್ರಮ

ಕಳೆದ ಫೆಬ್ರವರಿಯಲ್ಲಿ ಹೈಕೋರ್ಟ್ ವಿಭಾಗೀಯ ಪೀಠವು ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಕೆರೆಯ ಅತಿಕ್ರಮಣ ತೆರವುಗೊಳಿಸಲು ಸಮಿತಿ ರಚಿಸುವಂತೆ ಸೂಚಿಸಿತ್ತು. ಸಮಿತಿ ರಚನೆಯಾಗಿ ಅತಿಕ್ರಮಣ ಗುರುತಿಸುವ ಕಾರ್ಯ ನಡೆಯುತ್ತಿದೆ. ಮೂರು ತಿಂಗಳೊಳಗೆ ವರದಿ ಸಲ್ಲಿಸಲು ಗಡುವು ನೀಡಿತ್ತು. ಈ ಹಿನ್ನಲೆ ಒತ್ತುವರಿಗೆ ಗುರುತು ಹಾಗು ತೆರವು ಕಾರ್ಯಾಚರಣೆ ವೇಗ ಪಡೆದುಕೊಂಡಿದೆ.

> **ರಾಜ್ಯದಲ್ಲಿ ಹೆಚ್ಚು ಕೆರೆಗಳನ್ನು ಹೊಂದಿರುವ ಜಿಲ್ಲೆ ನಮ್ಮದು. ಈಗಾಗಲೇ ಒಟ್ಟು 2930 ಕೆರೆ ಒತ್ತುವರಿಯಾಗಿರುವುದನ್ನು ಗುರುತಿಸಿ, 1251 ಕೆರೆಗಳ ಒತ್ತುವರಿ ತೆರವುಗೊಳಿಸಲಾಗಿದೆ. ಕೆರೆಗಳ ಸಂರಕ್ಷಣೆ ಕೇವಲ ಆಡಳಿತದ ಕೆಲಸವಲ್ಲ. ಜನರ ಸಹಭಾಗಿತ್ವವೂ ಅಗತ್ಯ. ಮುಂದಿನ ದಿನಗಳಲ್ಲಿ ಒತ್ತುವರಿ ತೆರವು ಕಾರ್ಯವನ್ನು ಇನ್ನಷ್ಟು ತೀವ್ರಗೊಳಿಸಲಾಗುವುದು.**
> **- ಕೆ.ಎಸ್.ಲತಾಕುಮಾರಿ, ಜಿಲ್ಲಾಧಿಕಾರಿ**

## ಆರೋಗ್ಯ ಇಲಾಖೆ ತಂಡ ಚಾಂಪಿಯನ್ | ಪತ್ರಕರ್ತರ ತಂಡ ರನ್ನರ್‌ಅಪ್

# ಪತ್ರಕರ್ತರು-ಅಧಿಕಾರಿಗಳ ಕ್ರಿಕೆಟ್ ಸಮ್ಮಿಲನ ಯಶಸ್ವಿ





• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ನಗರದ ಕಲಾ ಮತ್ತು ವಿಜ್ಞಾನ ಕಾಲೇಜು ಮೈದಾನದಲ್ಲಿ ಮೊದಲ ಬಾರಿಗೆ ಆಯೋಜಿಸಿದ್ದ ಅಧಿಕಾರಿಗಳು ಹಾಗು ಪತ್ರಕರ್ತರ ಕ್ರಿಕೆಟ್ ಸಮ್ಮಿಲನದ ಎರಡು ದಿನಗಳ ಪಂದ್ಯಾವಳಿ ಯಶಸ್ವಿಯಾಗಿ ನೆರವೇರಿತು. ಫೈನಲ್‌ನಲ್ಲಿ ಆರೋಗ್ಯ ಇಲಾಖೆ ತಂಡ ಪ್ರಶಸ್ತಿ ಗೆದ್ದು ಚಾಂಪಿಯನ್ ಪಟ್ಟಕ್ಕೇರಿತು.

ಟಾಸ್ ಸೋತರೂ ಮೊದಲು ಬ್ಯಾಟಿಂಗ್ ಮಾಡಿದ ಆರೋಗ್ಯ ಇಲಾಖೆ ತಂಡ ಸಂಘಟಿತ ಪ್ರದರ್ಶನ ನೀಡಿ ಗೆಲುವು ಸಾಧಿಸಿತು. ಆರಂಭದಿಂದಲೇ ಉತ್ತಮ ಆಟ ಪ್ರದರ್ಶಿಸಿದ್ದ ಜಿಲ್ಲಾ ಪತ್ರಕರ್ತರ ಸಂಘದ ತಂಡ ಫೈನಲ್ ಪ್ರವೇಶಿಸಿ ರನ್ನರ್ ಅಪ್ ಸ್ಥಾನಕ್ಕೆ ತೃಪ್ತಿಪಟ್ಟಿತು. ಪೊಲೀಸ್ ಇಲಾಖೆ ತಂಡ ಮೂರನೇ ಸ್ಥಾನ ಪಡೆದಿತು.

ವಿಜೇತ ತಂಡಕ್ಕೆ 25 ಸಾವಿರ ರೂ. ನಗದು ಬಹುಮಾನ ಹಾಗು ಟ್ರೋಫಿ, ರನ್ನರ್‌ಅಪ್ ತಂಡಕ್ಕೆ 15 ಸಾವಿರ ರೂ. ನಗದು ಮತ್ತು ಟ್ರೋಫಿ, ತೃತೀಯ ಸ್ಥಾನ ಪಡೆದ ತಂಡಕ್ಕೆ 10 ಸಾವಿರರೂ. ನಗದು ಹಾಗು ಟ್ರೋಫಿ ವಿತರಿಸಲಾಯಿತು.

ಆರೋಗ್ಯ ಇಲಾಖೆಯ ಅನಿಲ್ ಉತ್ತಮ ಬ್ಯಾಟರ್ ಪ್ರಶಸ್ತಿ ಪಡೆದರೆ, ಹರೀಶ್ ಬಾಬು ಉತ್ತಮ ಬೌಲರ್ ಗೌರವಕ್ಕೆ ಪಾತ್ರರಾದರು. ಜನಮಿತ್ರ ಪತ್ರಿಕೆಯ ಅಭಿಜಿತ್ ಸರಣಿ ಶ್ರೇಷ್ಠ ಪ್ರಶಸ್ತಿ ಪಡೆದರು.

ಬಹುಮಾನ ವಿತರಿಸಿ ಮಾತನಾಡಿದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಉಪಾಧ್ಯಕ್ಷ ಹೆಚ್.ಬಿ. ಮದನಗೌಡ, ಎರಡು ಪತ್ರಕರ್ತರ ತಂಡಗಳೊಂದಿಗೆ ಒಟ್ಟು 15 ಇಲಾಖೆಗಳ ಭಾಗವಹಿಸುವಿಕೆಯಿಂದ ಪಂದ್ಯಾವಳಿ ಅರ್ಥಪೂರ್ಣವಾಗಿ ಮೂಡಿಬಂದಿದೆ. ಯಶಸ್ಸಿಗೆ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು ಎಂದರು.

ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷರಾದ ರವಿ ನಾಕಲಗೂಡು, ಬಿ.ಆರ್. ಉದಯಕುಮಾರ್, ಬಾಳ್ಳುಗೋಪಾಲ್ ಹಾಗು ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಕೆ.ಪಿ.ಎಸ್. ಪ್ರಮೋದ್ ಪಂದ್ಯಾವಳಿಯ ಅಚ್ಚುಕಟ್ಟಾದ ಆಯೋಜನೆಯನ್ನು ಶ್ಲಾಘಿಸಿದರು.

» ನಾಲ್ಕನೇ ಪುಟದಲ್ಲಿ

> **ಎಲ್ಲರ ಸಂಘಟಿತ ಶ್ರಮದಿಂದ ಮೊದಲ ಪ್ರಯತ್ನವಾಗಿದ್ದರೂ ಪಂದ್ಯಾವಳಿ ಯಾವುದೇ ಅಡಚಣೆಗಳಿಲ್ಲದೆ ಯಶಸ್ವಿಯಾಗಿ ಪೂರ್ಣಗೊಂಡಿದೆ. ಈ ಕ್ರೀಡಾಕೂಟದಿಂದ ಪತ್ರಕರ್ತರು ಮತ್ತು ಅಧಿಕಾರಿಗಳ ನಡುವೆ ಬಾಂಧವ್ಯ ಹೆಚ್ಚಿದೆ. ಸಹಕರಿಸಿದ ಎಲ್ಲರಿಗೂ ಅಭಿನಂದನೆಗಳು.**
> **- ಜೆ.ಆರ್. ಕೆಂಚೇಗೌಡ, ಅಧ್ಯಕ್ಷರು, ಜಿಲ್ಲಾ ಪತ್ರಕರ್ತರ ಸಂಘ**

# ಗೊಬ್ಬರ ಪೂರೈಕೆಯಲ್ಲಿ ವ್ಯತ್ಯಯವಿಲ್ಲ: ಆತಂಕ ಬೇಡ

## ಅಗತ್ಯಕ್ಕಿಂತ ಹೆಚ್ಚು ದಾಸ್ತಾನು: ಕೃಷಿ ಇಲಾಖೆ

• ಪ್ರಜೋದಯ ವರದಿ

**ಆಲೂರು:** ಇರಾನ್-ಇಸ್ರೇಲ್ ಯುದ್ಧದ ಪರಿಣಾಮ ದೇಶದಲ್ಲಿ ಮುಂದಿನ ದಿನಗಳಲ್ಲಿ ರಸಗೊಬ್ಬರ ಕೊರತೆ ಉಂಟಾಗಬಹುದೆಂಬ ಗಾಳಿ ಸುದ್ದಿಗಳು ರೈತರಲ್ಲಿ ಆತಂಕ ಮೂಡಿಸಿದ್ದರೂ, ತಾಲ್ಲೂಕಿನಲ್ಲಿ ರಸಗೊಬ್ಬರ ಪೂರೈಕೆಯಲ್ಲಿ ವ್ಯತ್ಯಯವಿಲ್ಲವೆಂದು ಕೃಷಿ ಇಲಾಖೆ ಸ್ಪಷ್ಟಪಡಿಸಿದೆ.

ಮುಂಗಾರು ಹಂಗಾಮು ಆರಂಭ ವಾಗುತ್ತಿರುವ ಹಿನ್ನಲೆಯಲ್ಲಿ ರೈತರು ಮುಂಗಡವಾಗಿ ರಸಗೊಬ್ಬರ ಖರೀದಿಸಲು ಮುಗಿ ಬಿದ್ದಿರುವ ದೃಶ್ಯ ತಾಲ್ಲೂಕಿನಲ್ಲಿ ಕಂಡು ಬರುತ್ತಿದೆ. ಆದರೆ, ಅಗತ್ಯಕ್ಕಿಂತ ಹೆಚ್ಚು ದಾಸ್ತಾನು ಲಭ್ಯವಿದ್ದು, ರೈತರು ಅನಗತ್ಯ ಆತಂಕಕ್ಕೆ ಒಳ ಗಾಗಬಾರದೆಂದು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕ ರಮೇಶ್ ಕುಮಾರ್ ತಿಳಿಸಿದ್ದಾರೆ.

ಕೃಷಿ ಇಲಾಖೆಯ ಅಂಕಿ-ಅಂಶಗಳ ಪ್ರಕಾರ, 2026-27ನೇ ಸಾಲಿನ ಮುಂಗಾರು ಹಂಗಾಮಿಗೆ ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗೆ ತಾಲ್ಲೂಕಿಗೆ ಒಟ್ಟು 7,651 ಟನ್ ರಸಗೊಬ್ಬರ ಅವಶ್ಯಕತೆ ಇದೆ. ಪ್ರಸ್ತುತ ಸಹಕಾರ ಸಂಘಗಳು ಮತ್ತು ಖಾಸಗಿ ಮಳಿಗೆಗಳಲ್ಲಿ ಒಟ್ಟು 2,090 ಟನ್ ರಸಗೊಬ್ಬರ ದಾಸ್ತಾನು ಲಭ್ಯವಿದೆ. ತಾಲ್ಲೂಕಿನಲ್ಲಿ ಪ್ರಸ್ತುತ ಯೂರಿಯಾ -266 ಟನ್, ಡಿಎಪಿ -328 ಟನ್, ಎನ್‌ಪಿಕೆ ಕಾಂಪ್ಲೆಕ್ಸ್-1,330 ಟನ್, ಪೊಟ್ಯಾಶ್- 178 ಟನ್, ಸೂಪರ್ ಫಾಸ್ಫೇಟ್ 28 ಟನ್ ದಾಸ್ತಾನಿದೆ.



**ಯೂರಿಯಾ ಬಳಕೆ ಮಿತವಾಗಿರಲಿ**

ಯೂರಿಯಾ ಗೊಬ್ಬರದ ಅತಿಯಾದ ಬಳಕೆ ಭೂಮಿಯ ಫಲವತ್ತತೆ ಹಾಗು ಸೂಕ್ಷ್ಮಾಣು ಜೀವಿಗಳ ಮೇಲೆ ದುಷ್ಪರಿಣಾಮ ಬೀರುತ್ತದೆ. ಇದೇ ಕಾರಣಕ್ಕೆ ಯೂರಿಯಾ ಖರೀದಿಗೆ ರೈತರ ಸಂಖೆಯನ್ನು ಕಡ್ಡಾಯಗೊಳಿಸಲಾಗಿದೆ. ಡಿಎಪಿ ಗೊಬ್ಬರದಲ್ಲಿ ಸಾರಜನಕ ಮತ್ತು ರಂಜಕ ಅಂಶಗಳಿದ್ದರೂ, ಬೆಳೆಗಳಿಗೆ ಅಗತ್ಯವಿರುವ ಪೊಟ್ಯಾಶ್ ಅಂಶ ಇರುವುದಿಲ್ಲ. ಆದ್ದರಿಂದ ರೈತರು ಸಮತೋಲನ ಪೋಷಕಾಂಶ ಹೊಂದಿರುವ ಎನ್‌ಪಿಕೆ ಗೊಬ್ಬರ ಬಳಕೆಗೆ ಆದ್ಯತೆ ನೀಡಬೇಕೆಂದು ಸಲಹೆ ನೀಡಲಾಗಿದೆ.

**ಬಿತ್ತನೆ ಬೀಜಗಳಿಗೂ ಕಟ್ಟುನಿಟ್ಟಿನ ಪರಿಶೀಲನೆ**

ಮುಸುಕಿನ ಜೋಳ ಈ ಭಾಗದ ಪ್ರಮುಖ ಹಂಗಾಮಿನ ಬೆಳೆಯಾಗಿದ್ದು, ಇನ್ನೊಂದು ವಾರದಲ್ಲಿ ಬಿತ್ತನೆ ಬೀಜಗಳು ಕೃಷಿ ಇಲಾಖೆ ಹಾಗು ಖಾಸಗಿ ಮಳಿಗೆಗಳಲ್ಲಿ ಲಭ್ಯವಾಗಲಿವೆ. ಜೋಳದಲ್ಲಿ ಕಾಣಿಸಿಕೊಳ್ಳುವ ಬಿಳಿ ಸುಳಿ ರೋಗ ತಡೆಗಟ್ಟುವ ಉದ್ದೇಶದಿಂದ ಮಂಡ್ಯ ಜಿಲ್ಲೆಯ ವಿ.ಸಿ.ಫಾರಂನಲ್ಲಿ ವಿವಿಧ ಕಂಪನಿಗಳ ಬೀಜಗಳ ಪರೀಕ್ಷೆ ನಡೆಸಲಾಗಿದೆ. ಪರೀಕ್ಷಾ ವರದಿಯಲ್ಲಿ ಗುಣಮಟ್ಟ ದೃಢಪಟ್ಟ ಬೀಜಗಳನ್ನು ಮಾತ್ರ ಪೂರೈಕೆ ಮಾಡಲು ಸೂಚಿಸಲಾಗಿದೆ ಎಂದು ಕೃಷಿ ಇಲಾಖೆ ತಿಳಿಸಿದೆ.

> **ತಾಲ್ಲೂಕಿನಲ್ಲಿ ಎಲ್ಲಾ ವಿಧದ ರಸಗೊಬ್ಬರಗಳು ಸಮರ್ಪಕ ಪ್ರಮಾಣದಲ್ಲಿ ಲಭ್ಯವಿದೆ. ಪ್ರತಿದಿನವೂ ಅಡೆತಡೆ ಇಲ್ಲದೆ ಪೂರೈಕೆ ನಡೆಯುತ್ತಿದೆ. ಕೃತಕ ಅಭಾವ ಸೃಷ್ಟಿಸುವ ಅಥವಾ ಸರ್ಕಾರ ನಿಗದಿಪಡಿಸಿದ ದರಕ್ಕಿಂತ ಹೆಚ್ಚು ಹಣ ವಸೂಲಿ ಮಾಡುವವರ ವಿರುದ್ಧ ರೈತರು ತಕ್ಷಣ ಕೃಷಿ ಇಲಾಖೆಗೆ ದೂರು ನೀಡಬೇಕು.**
> **- ರಮೇಶ್ ಕುಮಾರ್, ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕ**

C M Y K

# ಭಾವ ಲಹರಿ

> ಒಂದು ಸಣ್ಣ ಮಠ. ಮಠದ ಹಿಂಭಾಗದಲ್ಲಿ ಒಂದು ತೋಟ. ಆ ತೋಟದಲ್ಲಿ ಸಾಮಾನ್ಯ ಬಟಾಣಿ ಗಿಡಗಳು. ಅವುಗಳಲ್ಲಿ ಕೆಲವಕ್ಕೆ ನೇರಳೆ ಹೂವು, ಕೆಲವಕ್ಕೆ ಬಿಳಿ ಹೂವು. ಕೆಲವಕ್ಕೆ ಉದ್ದ ಕಾಂಡ, ಕೆಲವಕ್ಕೆ ಗಿಡ್ಡ ಕಾಂಡ. ಕೆಲವು ಬೀಜಗಳ ಮೇಲ್ಮೆ ನುಣುಪು, ಕೆಲವು ಬೀಜಗಳ ಮೇಲ್ಮೆ ಮುದುಡಿಕೆ. ಜನಸಾಮಾನ್ಯರ ಕಣ್ಣಿಗೆ ಇದು ತೋಟಗಾರಿಕೆಯ ಒಂದು ಸಾಮಾನ್ಯ ವಿಷಯ ಮಾತ್ರ.

## ಕೂಸು ಹುಟ್ಟುವ ಮೊದಲೇ ಕುಲಾವಿ ಹೊಲಿದ ಗ್ರೆಗರ್ ಮೆಂಡಲ್

ಹಿಂದಿರುಗಿ ನೋಡಿದಾಗ ಒಂದು ಸಣ್ಣ ಮಠ. ಮಠದ ಹಿಂಭಾಗದಲ್ಲಿ ಒಂದು ತೋಟ. ಆ ತೋಟದಲ್ಲಿ ಸಾಮಾನ್ಯ ಬಟಾಣಿ ಗಿಡಗಳು. ಅವುಗಳಲ್ಲಿ ಕೆಲವಕ್ಕೆ ನೇರಳೆ ಹೂವು, ಕೆಲವಕ್ಕೆ ಬಿಳಿ ಹೂವು. ಕೆಲವಕ್ಕೆ ಉದ್ದ ಕಾಂಡ, ಕೆಲವಕ್ಕೆ ಗಿಡ್ಡ ಕಾಂಡ. ಕೆಲವು ಬೀಜಗಳ ಮೇಲ್ಮೆ ನುಣುಪು, ಕೆಲವು ಬೀಜಗಳ ಮೇಲ್ಮೆ ಮುದುಡಿಕೆ. ಜನ ಸಾಮಾನ್ಯರ ಕಣ್ಣಿಗೆ ಇದು ತೋಟಗಾರಿಕೆಯ ಒಂದು ಸಾಮಾನ್ಯ ವಿಷಯ ಮಾತ್ರ.

ಒಬ್ಬ ಶಾಂತ, ಹಠಮಾರಿ, ಲೆಕ್ಕಪ್ರಿಯ ಸನ್ಯಾಸಿಯ ಕಣ್ಣಿಗೆ, ಇದು ಸಾಮಾನ್ಯ ತೋಟಗಾರಿಕೆಯ ವಿಷಯವಾಗಿರಲಿಲ್ಲ, ಅದರಲ್ಲಿ ಅಡಗಿದ್ದ ಪ್ರಕೃತಿಯ ರಹಸ್ಯವನ್ನು ಭೇದಿಸುವ ಛಲವಿತ್ತು! ಆ ಸನ್ಯಾಸಿಯ ಹೆಸರು ಗ್ರೆಗರ್ ಜೋಹಾನ್ ಮೆಂಡಲ್ (1822–1884). ಅವರನ್ನು ಇಂದು ನಾವು ತಳಿ ವಿಜ್ಞಾನದ ಪಿತಾಮಹ (ಫಾದರ್ ಆಫ್ ಜೆನೆಟಿಕ್ಸ್) ಎಂದು ಕರೆಯುತ್ತೇವೆ. ಆದರೆ ಅವರ ಬದುಕಿನ ಕಾಲದಲ್ಲಿ ಅವರನ್ನು ಅಷ್ಟಾಗಿ ಯಾರೂ ಗಮನಿಸಲಿಲ್ಲ. ಅವರು ದೊಡ್ಡ ವಿಶ್ವವಿದ್ಯಾಲಯದ ಪ್ರಸಿದ್ಧ ಪ್ರಾಧ್ಯಾಪಕರಾಗಿರಲಿಲ್ಲ. ರಾಜನ ಅರಮನೆಯ ವಿಜ್ಞಾನಿಯಲ್ಲ. ದೊಡ್ಡ ಪ್ರಯೋಗಾಲಯದ ಮುಖ್ಯಸ್ಥರಾಗಿರಲಿಲ್ಲ. ಅವರು ಕೇವಲ ಬ್ರುನೊ ನಗರದಲ್ಲಿದ್ದ ಆಗಸ್ಟಿನಿಯನ್ ಮಠದ ಸನ್ಯಾಸಿ; ತಮ್ಮ ತೋಟದಲ್ಲಿ ಬಟಾಣಿ ಗಿಡಗಳನ್ನು ಬೆಳೆಸಿ, ಅವುಗಳ ಸಂತತಿಯನ್ನು ಎಣಿಸುತ್ತಿದ್ದ ಅಪರೂಪದ, ವಿಚಿತ್ರ ಹವ್ಯಾಸದ ಒಬ್ಬ ಅಸಾಮಾನ್ಯ ಮಾನವ ಮಾತ್ರವಾಗಿದ್ದ.


ಜನನ: ಮೆಂಡಲ್ 1822 ಜುಲೈ 20ರಂದು ಇಂದಿನ ಚೆಕ್ ಗಣರಾಜ್ಯದ ಭಾಗವಾಗಿರುವ ಸಿಲೆಷಿಯಾದಲ್ಲಿ ಜನಿಸಿದರು; 1843ರಲ್ಲಿ ಬ್ರುನೊದ ಸೇಂಟ್ ಥಾಮಸ್ ಮಠಕ್ಕೆ ಸೇರಿದರು. ಮೆಂಡಲ್ ಹುಟ್ಟಿದ್ದು ರೈತ ಕುಟುಂಬದಲ್ಲಿ. ಬಾಲ್ಯದಿಂದಲೇ ಗಿಡಮರಗಳ ಜೀವನವನ್ನು ಗಮನಿಸುವ ಅಭ್ಯಾಸ ಇತ್ತು. ಮೆಂಡಲ್ ಮೊದಲಿನಿಂದಲೇ ವಿಜ್ಞಾನಿಯಾಗಿ ಗೌರವಿಸಲ್ಪಟ್ಟವರಲ್ಲ. ಅವರು ಶಿಕ್ಷಕರಾಗಲು ಪ್ರಯತ್ನಿಸಿದರು; ಆದರೆ ಶಿಕ್ಷಕ ಪ್ರಮಾಣಪತ್ರ ಪರೀಕ್ಷೆಯಲ್ಲಿ ವಿಫಲರಾದರು.

1850ರಲ್ಲಿ ಶಿಕ್ಷಕ ಅರ್ಹತಾ ಪರೀಕ್ಷೆಯಲ್ಲಿ ವಿಫಲರಾದ ನಂತರ, ಮಠದ ಮುಖ್ಯಸ್ಥರಾದ ಅಬ್ಬಾಟ್ ಸಿರಿಲ್ ನ್ಯಾಪ್ ಅವರು ಅವರನ್ನು ವಿಯನ್ನಾ ವಿಶ್ವವಿದ್ಯಾಲಯಕ್ಕೆ ಹೆಚ್ಚಿನ ಅಧ್ಯಯನಕ್ಕಾಗಿ ಕಳುಹಿಸಿದರು. ಅಲ್ಲಿ ಮೆಂಡಲ್ ಗಣಿತ, ಭೌತಶಾಸ್ತ್ರ, ಸಸ್ಯಶಾಸ್ತ್ರ ಇತ್ಯಾದಿಗಳನ್ನು ಕಲಿತರು. ನಂತರ ಮತ್ತೆ ಮಠಕ್ಕೆ ಹಿಂದಿರುಗಿ ಬೋಧನೆಯಲ್ಲಿ ತೊಡಗಿದರು.

ವಿಫಲ: ಎಲ್ಲರೂ ಎಲ್ಲ ವಿಷಯಗಳಲ್ಲಿ ಆಸಕ್ತಿಯನ್ನು ಹೊಂದಿರುವುದಿಲ್ಲ. ಹಾಗಾಗಿ ಒಬ್ಬರು ಒಂದು ವಿಷಯದಲ್ಲಿ ನಪಾಸು ಆದರೆಂದು, ಅವರನ್ನು ದಡ್ಡರ ಗುಂಪಿಗೆ ಸೇರಿಸುವ ಹಾಗಿರಲಿಲ್ಲ. ಅವರು ಮತ್ಯಾವುದೋ ಒಂದು ಕ್ಷೇತ್ರದಲ್ಲಿ ಮನುಕುಲದ ಕಣ್ಣನ್ನು ತೆರೆಸಬಲ್ಲ ಪ್ರತಿಭಾವಂತರಾಗಿರಬಹುದು. ಮೆಂಡಲ್ ಶಿಕ್ಷಕ ಪರೀಕ್ಷೆಯಲ್ಲಿ ಸೋತರು; ಆದರೆ ಪ್ರಕೃತಿಯ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಮಠದ ತೋಟದಲ್ಲಿ ಮೆಂಡಲ್ ಬಟಾಣಿ ಗಿಡಗಳನ್ನು ಆರಿಸಿಕೊಂಡದ್ದು ಯಾದೃಚ್ಛಿಕವಲ್ಲ.

ಬಟಾಣಿ ಗಿಡದಲ್ಲಿ ಕೆಲವು ಗುಣಗಳು ಸ್ಪಷ್ಟವಾಗಿ ಕಾಣುತ್ತವೆ: ಹೂವು ನೇರಳೆ ಅಥವಾ ಬಿಳಿ; ಬೀಜ ಮೃದುವು ಅಥವಾ ಮುದುರು; ಬೀಜ ಹಳದಿ ಅಥವಾ ಹಸಿರು; ಗಿಡ ಉದ್ದ ಅಥವಾ ಕುಬ್ಜ. ಇವುಗಳನ್ನು ಎಣಿಸಲು ಸುಲಭ. ಬಟಾಣಿ ಗಿಡವನ್ನು ಸ್ವಯಂ ಪರಾಗಸ್ಪರ್ಶಗೊಳಿಸಬಹುದು; ಬೇಕಾದರೆ ಒಂದು ಗಿಡದ ಪುಷ್ಪರಜವನ್ನು ಮತ್ತೊಂದು ಗಿಡಕ್ಕೆ ಮಾನವನೇ ಹಾಕಬಹುದು.

ಹೀಗಾಗಿ ತಂದೆ ಯಾರು, ತಾಯಿ ಯಾರು ಎಂಬುದನ್ನು ನಿಯಂತ್ರಿಸಬಹುದು. ವಿಜ್ಞಾನದಲ್ಲಿ ನಿಯಂತ್ರಣವೇ ಪ್ರಯೋಗದ ಆತ್ಮ. 1856ರಿಂದ 1863ರವರೆಗೆ ಮೆಂಡಲ್ ಸಾವಿರಾರು ಬಟಾಣಿ ಗಿಡಗಳನ್ನು ಬೆಳೆಸಿ, ಅವುಗಳ ಸಂತತಿಯನ್ನು ಪರಿಶೀಲಿಸಿದರು. ಅನೇಕ ಮೂಲಗಳು ಅವರು ಸುಮಾರು 28000 ಬಟಾಣಿ ಗಿಡಗಳನ್ನು ಪರೀಕ್ಷಿಸಿದರೆಂದು ಹೇಳುತ್ತವೆ. ಅವರು 1865ರಲ್ಲಿ ಬ್ರುನೊದ ಪ್ರಕೃತಿ ವಿಜ್ಞಾನ ಸಂಘದಲ್ಲಿ ತಮ್ಮ ಫಲಿತಾಂಶಗಳನ್ನು ಮಂಡಿಸಿದರು;




1866ರಲ್ಲಿ ಎಕ್ಸ್‌ಪೆರಿಮೆಂಟ್ಸ್ ಆನ್ ಪ್ಲಾಂಟ್ ಹೈಬ್ರಿಡ್ಸ್ ಎಂಬ ಪ್ರಸಿದ್ಧ ಪ್ರಬಂಧವನ್ನು ಪ್ರಕಟಿಸಿದರು. ಇಲ್ಲಿ ಒಂದು ದೃಶ್ಯವನ್ನು ಮನಸ್ಸಿನಲ್ಲಿ ಕಟ್ಟಿಕೊಳ್ಳಿ. ಮಠದ ತೋಟದಲ್ಲಿ ಮೆಂಡಲ್ ಬೆಳಗಿನ ಮಂಜಿನಲ್ಲಿ ನಿಧಾನವಾಗಿ ನಡೆಯುತ್ತಿದ್ದಾರೆ.

ಕೈಯಲ್ಲಿ ಕಾಗದ, ಪೆನ್ಸಿಲ್. ಪ್ರತಿಯೊಂದು ಗಿಡಕ್ಕೆ ಸಂಖ್ಯೆ. ಯಾವ ಗಿಡದ ಹೂವು ಯಾವ ಬಣ್ಣ? ಯಾವ ಗಿಡದಿಂದ ಯಾವ ಬೀಜ? ಯಾವ ಸಂತತಿಯಲ್ಲಿ ಯಾವ ಗುಣ? ಎಲ್ಲವನ್ನೂ ಎಣಿಕೆ. ಅವರು ಕೇವಲ ತೋಟಗಾರನಲ್ಲ; ಅವರು ಪ್ರಕೃತಿಯ ಲೆಕ್ಕಿಗ. ಹಳದಿ ಬಟಾಣಿ ಮತ್ತು ಹಸಿರು ಬಟಾಣಿ ಗಿಡಗಳನ್ನು ಅಡ್ಡ ಹಾಯಿಸಿದಾಗ (ಕ್ರಾಸ್) ಮೊದಲ ತಲೆಮಾರಿನಲ್ಲಿ ಎಲ್ಲ ಗಿಡಗಳು ಹಳದಿಯ ಗಿಡಗಳೇ ಆಗಿದ್ದವು.

ಹಸಿರು ಗುಣ ಮಾಯವಾದಂತಾಗಿತ್ತು. ಆದರೆ ಮೆಂಡಲ್ ಅಲ್ಲಿ ನಿಲ್ಲಲಿಲ್ಲ. ಅವರು ಮುಂದಿನ ತಲೆಮಾರನ್ನು ನೋಡಿದರು. ಆಗ ಹಸಿರು ಮತ್ತೆ ಕಾಣಿಸಿತು – ಸುಮಾರು 3:1 ಅನುಪಾತದಲ್ಲಿ. ಅಂದರೆ ಮೂರು ಹಳದಿ, ಒಂದು ಹಸಿರು. ಇದೇ ಅದ್ಭುತ. ಹಸಿರು ಗುಣವು ಮಾಯವಾಗಿರಲಿಲ್ಲ; ಅದು ಮರೆಮಾಡಲ್ಪಟ್ಟಿತ್ತು.

ಹೀಗಾಗಿ ಮೆಂಡಲ್ ಪ್ರಬಲ ಮತ್ತು ಅಪ್ರಬಲ ಗುಣಗಳ ಕಲ್ಪನೆಯನ್ನು ರೂಪಿಸಿದರು. ಇಂದು ನಾವು ಅವನ್ನು ಡಾಮಿನಂಟ್ ಟ್ರೈಟ್ ಮತ್ತು ರಿಸೆಸಿವ್ ಟ್ರೈಟ್ಸ್ ಎಂದು ಕರೆಯುತ್ತೇವೆ. ಈ ಪರಿಕಲ್ಪನೆಯನ್ನು ದೈನಂದಿನ ಉದಾಹರಣೆಗಳೊಂದಿಗೆ ಸರಳವಾಗಿ ವಿವರಿಸಬಹುದು.


ಅಜ್ಜಿಗೆ ನಗುವಾಗ ಕೆನ್ನೆಯಲ್ಲಿ ಗುಳಿ ಬೀಳುತ್ತಿತ್ತು. ಮಗಳಲ್ಲಿ ಅಂತಹ ಗುಳಿಯು ಕಂಡು ಬರಲೇ ಇಲ್ಲ. ಆದರೆ ಮೊಮ್ಮಗಳಿಗೆ ಆ ಕೆನ್ನೆಗುಳಿ ಮತ್ತೆ ಕಾಣಿಸಿಕೊಂಡಿತು. ಆಗ ಊರಿನ ಜನರೆಲ್ಲ ಅಜ್ಜಿಯ ಗುಣ ಮೊಮ್ಮಗಳಿಗೆ ಬಂದಿದೆ ಎಂದರು. ಮೆಂಡಲ್ ಇದೇ ವಿಷಯವನ್ನು ವೈಜ್ಞಾನಿಕ ಪರಿಭಾಷೆಯಲ್ಲಿ ಹೇಳಿದರು.

ಮನುಷ್ಯರಲ್ಲಿ ಮಾತ್ರವಲ್ಲ, ಎಲ್ಲ ಜೀವರಾಶಿಗಳಲ್ಲಿ ಕೆಲವು ಗುಣಗಳು ಕೆಲವು ತಲೆಮಾರುಗಳಲ್ಲಿ ಸುಪ್ತವಾಗಿ ಅಡಗಿರಬಹುದು; ಆದರೆ ಅವು ನಾಶವಾಗುವುದಿಲ್ಲ. ಸೂಕ್ತ ಅವಕಾಶ-ಅನುಕೂಲ ದೊರೆತಾಗ ಅವು ಮತ್ತೆ ಹೊರಬರುತ್ತವೆ.

19ನೆಯ ಶತಮಾನದಲ್ಲಿ ಮೆಂಡಲ್ ಅವರು ಬಹಳ ದೊಡ್ಡದಾದ, ಆದರೆ ನಂಬಲು ಅಸಾಧ್ಯವಾದ ಒಂದು ಹೇಳಿಕೆಯನ್ನು ನೀಡಿದರು. ಜೀವರಾಶಿಗಳಲ್ಲಿರುವ ಪ್ರತಿಯೊಂದು ಗುಣ-ಲಕ್ಷಣವನ್ನು ತಂದೆತಾಯಿಯರಿಂದ ಬರುವ ಅಂಶಗಳು ನಿರ್ಧರಿಸುತ್ತವೆ. ಈ ಅಂಶಗಳನ್ನು ಫ್ಯಾಕ್ಟರ್ಸ್ ಎಂದು ಕರೆಯಬಹುದು. ಅವರು ಜೀನ್ ಎಂಬ ಪದವನ್ನು ಬಳಸಲಿಲ್ಲ; ಆ ಪದ ನಂತರ ಬಂದಿತು. ಆದರೆ ಅವರು ರೂಪಿಸಿದ ಫ್ಯಾಕ್ಟರ್ಸ್ ಇಂದಿನ ಜೀನ್ಸ್‌ಗಳ ಮೂಲಭಾವವೇ ಆಗಿತ್ತು. ಊಹಿಸಿಕೊಳ್ಳಿ. 19ನೆಯ ಶತಮಾನದಲ್ಲಿ, ವಿಜ್ಞಾನಿಯೇ ಅಲ್ಲದ ಓರ್ವ ಸಾಮಾನ್ಯ ಸನ್ಯಾಸಿಯು, ಕಣ್ಣಿಗೆ ಕಾಣದ ಅಂಶಗಳು ಜೀವಿಗಳ ಗುಣ-ಲಕ್ಷಣಗಳನ್ನು ನಿರ್ಧರಿಸುತ್ತವೆ ಎಂದು ದಿಟ್ಟವಾಗಿ ಘೋಷಿಸಿದ! ಹೀಗೆ ಹೇಳುವುದು ಒಂದು ದೊಡ್ಡ ಸಾಹಸವೇ ಆಗಿತ್ತು.

ಸೂಕ್ಷ್ಮದರ್ಶಕದಡಿಯಲ್ಲಿ ಕ್ರೋಮೋಸೋಮುಗಳ ಸ್ವರೂಪವನ್ನು ಅರಿಯುವುದಕ್ಕೆ ಮೊದಲೇ, ಡಿಎನ್‌ಎಗಳ ಸ್ವರೂಪವನ್ನು ತಿಳಿಯುವ ಮೊದಲೇ, ಈ ಆ ಜೀನುಗಳು ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಹರಿದು ಬರುವ ನಿಯಮಗಳನ್ನು ಘೋಷಿಸಿದರು ಎಂದರೆ ಅದು ನಂಬುವುದಕ್ಕೆ ಕಷ್ಟವಾದ ವಿಷಯವಾಗಿತ್ತು.


ಮೈ ಟೈಮ್ ವಿಲ್ ಕಮ್: ಜಗತ್ತು ಕಿವುಡಾಗಿದ್ದ ಕ್ಷಣ. 1866ರಲ್ಲಿ ಮೆಂಡಲ್ ತಮ್ಮ ಸಂಶೋಧನಾ ಪ್ರಬಂಧವನ್ನು ಮಂಡಿಸಿದರು. ಆ ಸಭೆಯಲ್ಲಿದ್ದ ವಿಜ್ಞಾನಿಗಳಿಗೆ ಮೆಂಡಲ್ ಹೇಳುತ್ತಿರುವುದು ಏನೆಂದು ಅರ್ಥವೇ ಆಗಲಿಲ್ಲ! ಮೆಂಡಲ್ ಜೀವವಿಜ್ಞಾನದೊಳಗೆ ಗಣಿತವನ್ನು ತಂದಿದ್ದರು.



ಗಿಡಗಳ ಲಕ್ಷಣಕ್ಕೂ 3:1 ಅನುಪಾತಕ್ಕೂ ಏನು ಸಂಬಂಧ? ಎಂದು ಅವರು ಲೇವಡಿ ಮಾಡಿದರು. ಆ ಕಾಲದ ವಿಖ್ಯಾತ ವಿಜ್ಞಾನಿ ಕಾರ್ಲ್ ವಾನ್ ನಾಗಿಲಿ ಎಂಬುವವರಿಗೆ ಮೆಂಡಲ್ ಪತ್ರ ಬರೆದು ತಮ್ಮ ಸಂಶೋಧನೆ ವಿವರಿಸಿದರು. ಆದರೆ ನಾಗಿಲಿ ಅವರು ಇದು ಕೇವಲ ಬಟಾಣಿ ಗಿಡಗಳಿಗೆ ಸೀಮಿತವಾದ ಹವ್ಯಾಸವಷ್ಟೇ ಎಂದು ಅದನ್ನು ತಿರಸ್ಕರಿಸಿದರು.

ಮೆಂಡಲ್ ಅವರ ಸಂಶೋಧನೆ ಡಾರ್ವಿನ್ ಅವರ ಗಮನಕ್ಕೂ ಬರಲಿಲ್ಲ. ಒಂದು ವೇಳೆ ಡಾರ್ವಿನ್ ಮತ್ತು ಮೆಂಡಲ್ ಅಂದು ಒಂದಾಗಿದ್ದರೆ, ವಿನದ ಇತಿಹಾಸವೇ ಬದಲಾಗುತ್ತಿತ್ತು. ಮೆಂಡಲ್ ಮಾತಿಗೆ ಕಿವಿಗೊಡದ ಜಗತ್ತಿನ ಬಗ್ಗೆ ನಿರಾಸೆ ಹೊಂದಲಿಲ್ಲ. ಅವರು ತಮ್ಮ ಸ್ನೇಹಿತನಿಗೆ ಹೇಳಿದ್ದರು: ನನ್ನ ಸಮಯ ಇನ್ನೂ ಬಂದಿಲ್ಲ, ಆದರೆ ನನ್ನ ಕಾಲ ಬಂದೇ ಬರುತ್ತದೆ. (ಮೈ ಟೈಮ್ ವಿಲ್ ಕಮ್) ಸಾವಿನ ನಂತರದ ವಿಜಯ: 1884ರಲ್ಲಿ ಮೆಂಡಲ್ ಮರಣ ಹೊಂದಿದರು. ಅವರ ಸಾವಿನ ನಂತರ ಮಠದ ಹೊಸ ಮುಖ್ಯಸ್ಥರು ಮೆಂಡಲ್ ಅವರ ಎಲ್ಲಾ ಸಂಶೋಧನಾ ಡೈರಿಗಳನ್ನು ಸುಟ್ಟು ಹಾಕಿದರು! ವೈಜ್ಞಾನಿಕ ಜಗತ್ತು ಅವರನ್ನು ಮರೆತೇ ಬಿಟ್ಟಿತು. ಆದರೆ ಮೆಂಡಲ್ ಹೇಳಿದ ಭವಿಷ್ಯ ಸುಳ್ಳಾಗಲಿಲ್ಲ.

ತ್ರಿಮೂರ್ತಿಗಳು: 1900ರಲ್ಲಿ, ಅಂದರೆ ಮೆಂಡಲ್ ಸತ್ತು 16 ವರ್ಷಗಳ ನಂತರ, ಮೂವರು ಬೇರೆ ಬೇರೆ ದೇಶದ ವಿಜ್ಞಾನಿಗಳು ಸ್ವತಂತ್ರವಾಗಿ ಪ್ರಯೋಗಗಳನ್ನು ಮಾಡಿದಾಗ ಅವರಿಗೆ ಮೆಂಡಲ್ ಅಂದು ಬರೆದಿದ್ದ ಸತ್ಯಗಳು ಗೋಚರಿಸಿದವು. ಹಳೆಯ ಗ್ರಂಥಾಲಯದ ಮೂಲೆಯಲ್ಲಿದ್ದ ಮೆಂಡಲ್ ಪ್ರಬಂಧಕ್ಕೆ ಆಗ ಬೆಲೆ ಬಂದಿತು. ಇಡೀ ಜಗತ್ತು ಬೆಚ್ಚಿ ಬಿದ್ದಿತು. ಒಬ್ಬ ಸನ್ಯಾಸಿ ಮಠದ ಗಾರ್ಡನ್ ನಲ್ಲಿ ಕುಳಿತು ಆಧುನಿಕ ವೈದ್ಯಕೀಯ ವಿಜ್ಞಾನದ ಬಾಗಿಲನ್ನು ಆಗಲೇ ತೆರೆದಿದ್ದರು!



ಮಹತ್ವ: ಇಂದು ಮೆಂಡಲ್ ಅವರ ಸಂಶೋಧನೆಯಿಲ್ಲದೆ ನಾವು ಕ್ಯಾನ್ಸರ್ ಚಿಕಿತ್ಸೆ, ಅಂಗಾಂಗ ಕಸಿ, ಕೃಷಿಯಲ್ಲಿ ಸುಧಾರಿತ ತಳಿ ಅಥವಾ ಅಪರಾಧ ಪತ್ತೆಯ ಡಿಎನ್‌ಎ ಟೆಸ್ಟ್ ಬಗ್ಗೆ ಯೋಚಿಸಲೂ ಸಾಧ್ಯವಿಲ್ಲ. ಮೆಂಡಲ್ ಪ್ರತಿಪಾದಿಸಿದ ಅನುವಂಶೀಯತೆಯ ಮೂರು ಮಹಾನ್ ನಿಯಮಗಳು: ಮೆಂಡಲ್ ಅವರು ತಮ್ಮ ಎಂಟು ವರ್ಷಗಳ ಸುದೀರ್ಘ ಸಂಶೋಧನೆಯ ನಂತರ ಮೂರು ಮುಖ್ಯ ನಿಯಮಗಳನ್ನು ಜಗತ್ತಿಗೆ ನೀಡಿದರು. ಇವುಗಳನ್ನು ಇಂದಿಗೂ ಜೆನೆಟಿಕ್ಸ್‌ನ ಬೈಬಲ್ ಎಂದು ಪರಿಗಣಿಸಲಾಗುತ್ತದೆ.

ಪ್ರಬಲತೆಯ ನಿಯಮ (ಲಾ ಆಫ್ ಡಾಮಿನನ್ಸ್): ಮೆಂಡಲ್ ಗಮನಿಸಿದಂತೆ, ಒಂದು ಲಕ್ಷಣದ ಎರಡು ವಿರುದ್ಧ ರೂಪಗಳು (ಉದಾಹರಣೆಗೆ: ಎತ್ತರ ಮತ್ತು ಗಿಡ್ಡ) ಒಂದಾದಾಗ, ಮೊದಲ ತಲೆಮಾರಿನಲ್ಲಿ ಕೇವಲ ಒಂದು ಲಕ್ಷಣ ಮಾತ್ರ ವ್ಯಕ್ತವಾಗುತ್ತದೆ.

ಉದಾಹರಣೆ: ಶುದ್ಧ ಎತ್ತರದ ಗಿಡ ಮತ್ತು ಶುದ್ಧ ಗಿಡ್ಡ ಗಿಡದ ನಡುವೆ ಪರಾಗಸ್ಪರ್ಶ ಮಾಡಿದಾಗ, ಹುಟ್ಟುವ ಎಲ್ಲಾ ಗಿಡಗಳೂ ಎತ್ತರವಾಗಿಯೇ ಇರುತ್ತವೆ. ಇಲ್ಲಿ ಎತ್ತರದ ಗುಣವು ಪ್ರಬಲ ಮತ್ತು ಗಿಡ್ಡದ ಗುಣವು ಸುಪ್ತ ಆಗಿರುತ್ತದೆ. ಅಂದರೆ, ಸುಪ್ತ ಗುಣವು ಒಳಗಿದ್ದರೂ ಅದು ಹೊರಗೆ ಕಾಣಿಸಿಕೊಳ್ಳುವುದಿಲ್ಲ. ಇದು ನಮ್ಮ ಜೀವನದ ಅನೇಕ ಗುಣಗಳಿಗೂ ಅನ್ವಯಿಸುತ್ತದೆ.

ಪ್ರತ್ಯೇಕೀಕರಣದ ನಿಯಮ (ಲಾ ಆಫ್ ಸೆಗ್ರಿಗೇಶನ್): ಇದು ಮೆಂಡಲ್ ಅವರ ಅತ್ಯಂತ ಮಹತ್ವದ ಸಂಶೋಧನೆ. ಮೊದಲ ತಲೆಮಾರಿನಲ್ಲಿ ಗಿಡ್ಡ ಗಿಡದ ಗುಣ ಕಾಣಿಸದಿದ್ದರೂ, ಅದು ನಾಶವಾಗಿರುವುದಿಲ್ಲ ಎಂದು ಮೆಂಡಲ್ ವಾದಿಸಿದರು.

ಸಂತಾನೋತ್ಪತ್ತಿಯ ಸಮಯದಲ್ಲಿ ಈ ಗುಣಗಳು (ಫ್ಯಾಕ್ಟರ್ಸ್/ಜೀನ್ಸ್) ಒಂದಕ್ಕೊಂದು ಮಿಶ್ರಣವಾಗದೆ ಪ್ರತ್ಯೇಕವಾಗುತ್ತವೆ. ಈ ಕಾರಣದಿಂದಲೇ, ಎರಡನೇ ತಲೆಮಾರಿನ ಗಿಡಗಳಲ್ಲಿ ಅಚ್ಚರಿಯ ರೀತಿಯಲ್ಲಿ ಮತ್ತೆ ಗಿಡ್ಡ ಗಿಡಗಳು (25% ಅನುಪಾತದಲ್ಲಿ) ಪ್ರತ್ಯೇಕವಾಗಿ ಹುಟ್ಟುತ್ತವೆ. ಅಂದರೆ, ತಂದೆ-ತಾಯಿಯ ಲಕ್ಷಣಗಳು ಮಗುವಿನಲ್ಲಿ ಸೇರಿಕೊಂಡರೂ, ಅವು ತಮ್ಮ ಅನನ್ಯತೆಯನ್ನು ಕಳೆದುಕೊಳ್ಳುವುದಿಲ್ಲ.

ಸ್ವತಂತ್ರ ವಿಂಗಡಣೆಯ ನಿಯಮ (ಲಾ ಆಫ್ ಇಂಡಿಪೆಂಡೆಂಟ್ ಅಸಾರ್ಟ್ಮೆಂಟ್): ಒಂದು ಗಿಡದ ಬಣ್ಣ ಮತ್ತು ಅದರ ಎತ್ತರಕ್ಕೂ ಒಂದಕ್ಕೊಂದು ಸಂಬಂಧವಿಲ್ಲ ಎಂದು ಮೆಂಡಲ್ ಕಂಡುಕೊಂಡರು.

ಉದಾಹರಣೆ: ಹಳದಿ ಬಣ್ಣದ ಕಾಳುಗಳಿರುವ ಗಿಡ ಯಾವಾಗಲೂ ಎತ್ತರವಾಗಿಯೇ ಇರಬೇಕೆಂದಿಲ್ಲ. ಹಳದಿ ಕಾಳುಗಳು ಗಿಡ್ಡ ಗಿಡದಲ್ಲೂ ಇರಬಹುದು ಅಥವಾ ಹಸಿರು ಕಾಳುಗಳು ಎತ್ತರ ಗಿಡದಲ್ಲೂ ಇರಬಹುದು.

ಪ್ರತಿಯೊಂದು ಲಕ್ಷಣವೂ (ಬಣ್ಣ, ಎತ್ತರ, ಬೀಜದ ಆಕಾರ) ಇನ್ನೊಂದು ಲಕ್ಷಣದ ಹಸ್ತಕ್ಷೇಪವಿಲ್ಲದೆ ಸ್ವತಂತ್ರವಾಗಿ ಮುಂದಿನ ತಲೆಮಾರಿಗೆ ಸಾಗುತ್ತದೆ. ಈ ನಿಯಮಗಳು ನಮಗೇಕೆ ಮುಖ್ಯ? ಮೆಂಡಲ್ ಅವರ ಈ ನಿಯಮಗಳು ಕೇವಲ ಬಟಾಣಿ ಗಿಡಗಳಿಗೆ ಸೀಮಿತವಲ್ಲ.

ಮನುಷ್ಯರಲ್ಲಿ ಕಣ್ಣಿನ ಬಣ್ಣ, ಕೂದಲಿನ ವಿನ್ಯಾಸ, ರಕ್ತದ ಗುಂಪುಗಳು ಮತ್ತು ಕೆಲವು ಅನುವಂಶೀಯ ಕಾಯಿಲೆಗಳು (ಉದಾಹರಣೆಗೆ ಹಿಮೋಫಿಲಿಯಾ ಅಥವಾ ವರ್ಣಾಂಧತೆ) ಹೇಗೆ ಹರಡುತ್ತವೆ ಎಂಬುದನ್ನು ಅರ್ಥಮಾಡಿಕೊಳ್ಳಲು ಈ ನಿಯಮಗಳೇ ದಾರಿದೀಪ.

**– ಡಾ.ನಾ.** ಸೋಮೇಶ್ವರ

### ಮೆಂಡಲ್ ನಮಗೆ ಐದು ದೊಡ್ಡ ಪಾಠಗಳನ್ನು ಕೊಡುತ್ತಾರೆ.

- ಸಣ್ಣ ವಸ್ತುವಿನಲ್ಲೂ ದೊಡ್ಡ ಸತ್ಯ ಇರಬಹುದು. ಬಟಾಣಿ ಬೀಜ ಚಿಕ್ಕದು. ಆದರೆ ಅದರಿಂದ ಜೀವವಿಜ್ಞಾನದ ಮಹಾಸಿದ್ಧಾಂತ ಹುಟ್ಟಿತು.
- ಎಣಿಕೆಯು (ಗಣಿತ) ವಿಜ್ಞಾನಕ್ಕೆ ಆತ್ಮ. ಅವರು ಕೇವಲ ಹಳದಿ ಹೆಚ್ಚು, ಹಸಿರು ಕಡಿಮೆ ಎಂದು ಹೇಳಲಿಲ್ಲ. ಅವರು ಅನುಪಾತ ಕಂಡರು – 3:1, 1:5:1. ಸಂಖ್ಯೆಗಳು ಪ್ರಕೃತಿಯ ಭಾಷೆ.
- ಸಹನೆ ಇಲ್ಲದೆ ಸಂಶೋಧನೆ ಇಲ್ಲ. ಎಂಟು ವರ್ಷಗಳ ಕಾಲ ಗಿಡ ಬೆಳೆಸಿ, ತಲೆಮಾರು ನೋಡಿದರು. ಇಂದಿನ ತಕ್ಷಣದ ಫಲಿತಾಂಶ ಬಯಸುವ ಕಾಲದಲ್ಲಿ ಮೆಂಡಲ್ ನಮಗೆ ನಿಧಾನಶೀಲತೆಯ ಮಹತ್ವ ಕಲಿಸುತ್ತಾರೆ.
- ಒಂದು ತಲೆಮಾರಿನ ವಿಜ್ಞಾನಿಗಳು ನಿಮ್ಮನ್ನು ಅರ್ಥಮಾಡಿಕೊಳ್ಳದಿದ್ದರೂ ಸತ್ಯ ನಾಶವಾಗುವುದಿಲ್ಲ. ಅವರ ಲೇಖನವು ಕಾಲನ ಮಣ್ಣಿನಡಿಯಲ್ಲಿ ಮಲಗಿದ ಬೀಜದಂತೆ ಇತ್ತು. 1900ರಲ್ಲಿ ಅದು ಮೊಳಕೆಯೊಡೆಯಿತು.
- ವಿಜ್ಞಾನ ಮತ್ತು ಆಧ್ಯಾತ್ಮ ಶತ್ರುಗಳಾಗಬೇಕಿಲ್ಲ. ಮಠದ ಸನ್ಯಾಸಿಯೊಬ್ಬ ಪ್ರಕೃತಿಯನ್ನು ಗಮನಿಸಿ, ದೇವರ ಸೃಷ್ಟಿಯಲ್ಲಿರುವ ನಿಯಮವನ್ನು ಗಣಿತದ ರೂಪದಲ್ಲಿ ಕಂಡುಹಿಡಿದ. ಜ್ಞಾನಕ್ಕೆ ಗಡಿ ಇಲ್ಲ. ಮೆಂಡಲ್ ಬದುಕಿನ ಕೊನೆಯ ಭಾಗ ಶಾಂತವಾಗಿತ್ತು; ಆದರೆ ಅವರ ಚಿಂತನೆ ಭವಿಷ್ಯದಲ್ಲಿ ಸ್ಫೋಟವಾಯಿತು. ಒಬ್ಬ ಸನ್ಯಾಸಿಯ ತೋಟದಿಂದ ಆರಂಭವಾದ ಪ್ರಯಾಣ ಇಂದು ಮಾನವ ಜೀನೋಮ್ ಯೋಜನೆ, ಜೀನ್ ಚಿಕಿತ್ಸೆ, ವೈಯಕ್ತಿಕ ವೈದ್ಯಕೀಯದವರೆಗೆ ಬಂದಿದೆ. ರೋಗದ ಅಪಾಯವನ್ನು ಮುಂಚಿತವಾಗಿ ತಿಳಿಯುವ ವೈದ್ಯಕೀಯ, ಕುಟುಂಬ ಸಲಹೆ, ಕೃಷಿಯಲ್ಲಿ ಉತ್ತಮ ತಳಿಗಳು, ಪಶುಸಂಗೋಪನೆಯಲ್ಲಿ ಆಯ್ಕೆ – ಇವೆಲ್ಲ ಮೆಂಡಲ್ ತೋರಿಸಿದ ದಾರಿಯ ಮುಂದಿನ ಮೈಲುಗಲ್ಲುಗಳು.


## ಕನ್ನಡ ಕವನಗಳು ★★★★★★

### ಜನುಮಧಾತೆ

ಜಗದ ಜೀವಧಾತೆ
ಅಮ್ಮನೆಂಬ ಮಹಾಮಾತೆ
ನನಗೆ ಜನುಮ ನೀಡಿಧಾತೆಯು
ನೀನೇ ಅಲ್ಲವೇ
ಒಡಲೊಳಗೆ ಅಡಗಿಸಿ
ನವಮಾಸ ಪೋಷಿಸಿ ನನ್ನನ್ನು ರಕ್ಷಿಸಿ
ಹೊರಗೆ ಬಂದಾಗ ನಗುಮುಖದಿ
ಸ್ವಾಗತಿಸಿದವಳು ನೀನಲ್ಲವೇ
ನನ್ನೆಯ ಅಳುವಿಗೆ ಸ್ಪಂದಿಸಿ
ಅಕ್ಕರೆಯಿಂದಲಿ ಅಪ್ಪುಗೆ ನೀಡಿದವಳು
ಮಮತೆಯಿಂದಲಿ ಮುತ್ತನಿತ್ತು
ಮುದ್ದಾಡಿದ ಮಹಾಮಾಯಿ ನೀನಲ್ಲವೇ
ಹಸಿದ ಕಂದಗೆ ತನ್ನೆದೆಯ ಹಾಲುಣಿಸಿ
ಮಡಿಲಲಿ ಮಲಗಿಸಿ ಜೋಗುಳವ ಕೇಳಿಸಿ
ಕಣ್ಣಲ್ಲಿ ಕಣ್ಣಿಟ್ಟು ಕಷ್ಟಗಳು ಬಾರದಂತೆ
ಸಾಕಿ ಸಲಹಿದ ಕರುಣಾಮಯಿ ನೀನಲ್ಲವೇ
ಬೇಡದೆ ಎಲ್ಲವನು ನೀಡಿದ ನೀನು
ಬೇಡಿದರೂ ನೀಡದೆ ಸತಾಯಿಸೋ
ದೇವರಿಗೂ ಮಿಗಿಲಾಗಿ ನಿಂತಿರುವ
ಕಣ್ಣಿಗೆ ಕಾಣುವ ನಿಜ ದೈವ ನೀನೇ ಅಲ್ಲವೇ
ಹಿಡಿಯಬೇಕಿದೆ ನಿನ್ನೆಯ ಕಾಲನು
ಜಗದ ಜೀವಧಾತೆಯೇ
ನನಗೆ ಜನುಮ ನೀಡಿದಾತೆಯೇ
ನೀನೇ ನನಗೆ ಮಹಾ ಮಾತೆಯೇ

**– ಮಧು ಕೆ ದೇವರಾಜ್**
**9901246706**
ಕಾರ್ಯದರ್ಶಿ / ಇತಿಹಾಸ ಉಪನ್ಯಾಸಕ
ದ.ಸಾ.ಪ ಜಿಲ್ಲಾ ಘಟಕ ಹಾಸನ





## ಪ್ರೀತಿಪಾತ್ರರಿಗೆ ಸಮಯ ನೀಡುವುದೂ ಮುಖ್ಯ

ಒಬ್ಬ ಅಪ್ಪ ತನ್ನ ಕುಟುಂಬಕ್ಕಾಗಿ ಹಗಲು-ರಾತ್ರಿ ದುಡಿಯುತ್ತಲೇ ಇದ್ದ. ತನ್ನ ಹೆಂಡತಿಗೂ, ತನ್ನ ಮಗುವಿಗೂ ಸಮಯ ನೀಡದೆ ನಿರಂತರವಾಗಿ ದುಡಿಯುತ್ತಿದ್ದ, ಹೀಗೆ ಒಂದು ದಿನ ಅವನ ಪುಟ್ಟ ಮಗಳು ಬಂದು, ಅಪ್ಪ, ನೀನು ಇಷ್ಟೆಲ್ಲಾ ನಮಗಾಗಿ ಹಗಲೂ ರಾತ್ರಿ ಎನ್ನದೆ ದುಡಿತಾ ಇದ್ದಿಯಲ್ಲಪ್ಪ? ಹಾಗಾದರೆ ನೀನು ಒಂದು ಗಂಟೆಗೆ ಎಷ್ಟು ಹಣ ಸಂಪಾದನೆ ಮಾಡುತ್ತೀಯಾ? ಎಂದು ಕೇಳಿದಳು.

ಆ ಪುಟ್ಟ ಮಗುವಿನ ಮಾತನ್ನು ಕೇಳಿದ ಅವಳಪ್ಪ ಹೆಮ್ಮೆಯಿಂದ ಗಂಟೆಗೆ ನಾನು 100-150 ರು.ದುಡಿಯುತ್ತೇನೆ ಮಗಳೇ ಎಂದು ಖುಷಿಯಿಂದ ಹೇಳಿದ. ಅದಕ್ಕೆ ಆ ಮಗು ತಕ್ಷಣವೇ ಎದ್ದು ಓಡಿ ಹೋಗಿ ಗೋಲಕವನ್ನು (ಹುಂಡಿ) ತೆಗೆದುಕೊಂಡು ಬಂದು ಅದನ್ನು ಹೊಡೆದು, ಕೂಡಿಸಿ ಇಟ್ಟಿದ್ದ ಎಲ್ಲಾ ಹಣವನ್ನು ಜೋಡಿಸಿ, ಎಣಿಸಿ ಅಪ್ಪ ಅಪ್ಪ ಇದರಲ್ಲಿ 200 ರು. ಇದೆ. ನೀನು ಒಂದು ಗಂಟೆಗೆ ದುಡಿಯುವುದಕ್ಕಿಂತ ಸ್ವಲ್ಪ ಜಾಸ್ತಿನೇ ಇದೆ. ಇದನ್ನು ತಗೊಂಡು ನನಗೆ ಅಂತ ನಿನ್ನ ಒಂದು ಗಂಟೆ ಟೈಮ್ ಕೊಡಪ್ಪ ಅಂತ. ಕೇಳಿದಾಗ ಮಗು ಏನು ಮಾಡುತ್ತಿದೆ? ಎಂದು ಕುತೂಹಲದಿಂದ ನೋಡುತ್ತಿದ್ದ ಅವನ ಕಂಗಳು ದಿಢೀರನೆ ಒದ್ದೆಯಾಗಿಬಿಟ್ಟವು.

ಈ ಘಟನೆಯಲ್ಲಿ ಬರುವ ಅಪ್ಪನ ಪಾತ್ರವನ್ನು ಈ ಲೇಖನವನ್ನು ಓದುತ್ತಿರುವ ನಾವು ಎಂದು ಕಲ್ಪಿಸಿಕೊಳ್ಳೋಣ, ಹಾಗೆಯೇ ಈ ಕಥೆಯಲ್ಲಿ ಬರುವ ಆ ಅಪ್ಪನ ಪುಟ್ಟ ಮಗಳನ್ನು ನಮ್ಮ ತಂದೆ-ತಾಯಿ, ಅಕ್ಕ-ತಮ್ಮ ಅಣ್ಣ-ತಂಗಿ, ಮಗಳು-ಹೆಂಡತಿ, ಮಗ-ಅಪ್ಪ, ಆತ್ಮೀಯ ಸ್ನೇಹಿತರು-ಸ್ನೇಹಿತೆಯರು ಹೀಗೆ ಒಟ್ಟಾರೆಯಾಗಿ ನಮ್ಮ ಪ್ರೀತಿಪಾತ್ರರು ಎಂದು ಕಲ್ಪಿಸಿಕೊಳ್ಳೋಣ. ಈ ಕಥೆ ಓದುವಾಗಲೇ ನಮಗೊಂದು ಪ್ರಶ್ನೆ ಮೂಡುತ್ತದೆ, ನನ್ನ ಪ್ರೀತಿಪಾತ್ರರಿಗೆ ನಾನೆಷ್ಟು ಸಮಯ ಕೊಡುತ್ತಿದ್ದೇನೆ ಖಂಡಿತವಾಗಿಯೂ ಈ ಪ್ರಶ್ನೆಯನ್ನು ನಮಗೆ ನಾವೇ ಕೇಳಿಕೊಳ್ಳುವಂತಹ ಸಮಯ ಅನಿವಾರ್ಯವಾಗಿ ಈಗ ಬಂದುಬಿಟ್ಟಿದೆ. ಪ್ರಸ್ತುತ, ಯಾಂತ್ರಿಕ ಜೀವನದಲ್ಲಿ ದುಡ್ಡು-ದುಡ್ಡು ಅಂತ ನಾವೆಲ್ಲರೂ ಓಡುತ್ತಲೇ ಇದ್ದೇವೆ. ಎಲ್ಲಿಗೆ ಓಡುತ್ತಿದ್ದೇವೆ? ಏಕೆ ಓಡುತ್ತಿದ್ದೇವೆ? ಯಾವುದೂ ಗೊತ್ತಿಲ್ಲ, ಒಟ್ಟಿನಲ್ಲಿ ದುಡ್ಡಿನ ಹಿಂದೆ ಕುದುರೆಗಳಂತೆ ಓಡುತ್ತಿದ್ದೇವೆ. ಯಾಕೆ ಎಂದು ಕೇಳಿದರೆ ನಮ್ಮ ಪ್ರೀತಿಪಾತ್ರರನ್ನು ಚೆನ್ನಾಗಿ ನೋಡಿಕೊಳ್ಳಲು. ನಮ್ಮ ಹಾಗೂ ನಮ್ಮ ಮಕ್ಕಳ ಮುಂದಿನ ಭವಿಷ್ಯವನ್ನು ಚೆನ್ನಾಗಿ ರೂಪಿಸಲು ಎಂದು ಹೇಳಿಬಿಡುತ್ತೇವೆ. ಹಣವೇ ಎಲ್ಲಕ್ಕೂ ದಾರಿಯಾದರೆ ಆ ಜೀವನವೇ ಯಾಂತ್ರಿಕ ಅಲ್ಲವೇ...?

ಕೊನೆಯದಾಗಿ ನಾವು ಅರ್ಥಮಾಡಿಕೊಳ್ಳಬೇಕಾಗಿರೊದು ಒಂದೇ, ದುಡ್ಡು ಎಲ್ಲದಕ್ಕೂ ಬೇಕು. ಹೊಟ್ಟೆಗೆ-ಬಟ್ಟೆಗೆ ಅಷ್ಟೇ ಅಲ್ಲಾ ಜೀವನದ ಪ್ರತಿ ಮೂಲೆಯನ್ನೂ ಆರಾಮದಾಯಕವಾಗಿ ಜೀವಿಸಲು ಹಣ ಬೇಕೇ ಬೇಕು. ಆದರೆ ಹಣದಿಂದ ಕೆಲವೊಂದನ್ನು ಕೊಂಡು ಕೊಳ್ಳಲು ಅಗುವುದಿಲ್ಲ.

ಜೀವನವೆಲ್ಲ ದುಡಿದು ದುಡಿದು ಕೋಟ್ಯಂತರ ಹಣ ಸಂಪಾದನೆ ಮಾಡಿ ನಾವು ಸಾಯುವ ಹೊತ್ತಿಗೆ ನಮ್ಮ ಪ್ರೀತಿಪಾತ್ರರು ಸುಖವಾಗಿರಲಿ ಎಂದು ಆ ಹಣವನ್ನೆಲ್ಲಾ ಅವರಿಗೆ ಧಾರೆ ಎರೆದು ಹೊರಟುಬಿಟ್ಟರೆ ಅವರ ಭಾವನೆಗಳನ್ನು ಅರ್ಥೈಸಿಕೊಳ್ಳುವವರ್ಯಾರು?

**– ನಾಗೇಂದ್ರ,** ಶಿವಮೊಗ್ಗ


## ಸೋಮನ ತಂದೆಯ ಕಥೆ

ಒಂದೂರಿನಲ್ಲಿ ಒಬ್ಬ ಬಡವನು ಇದ್ದನು. ಅವನು ದಿನವೂ ತಿರುಪಕ್ಕೆ ಹೋಗಿ ಹಿಟ್ಟನ್ನು ತರುವನು. ತನ್ನ ಹೊಟ್ಟೆಗಾಗಿ ಉಳಿದುದನ್ನು ಒಂದು ಮಡಿಕೆಯಲ್ಲಿ ಹಾಕಿ, ತನ್ನ ಮಲಗುವ ಕಡೆ ಅದನ್ನು ಒಂದು ಗೂಟಕ್ಕೆ ನೇತು ಹಾಕಿದ್ದನು. ಅದನ್ನು ಆಗಾಗ ನೋಡುತ್ತಿದ್ದರೆ ಅವನಿಗೆ ಏನೋ ಒಂದು ಸಂತೋಷ.

ಒಂದು ರಾತ್ರಿ ಅವನಿಗೆ ಹಿಟ್ಟಿನ ಮಡಿಕೆಯನ್ನು ನೋಡಿ ಹಾಗೆಯೇ ಒಂದು ಯೋಚನೆ ಬಂತು; ಈ ಮಡಕೆಯೇನೋ ಹಿಟ್ಟನಿಂದ ತುಂಬಿತು. ಏನಾದರೂ ದುರ್ಭಿಕ್ಷ ಬಂದರೆ ಇದಿಷ್ಟು ಹಿಟ್ಟಿಗೇ ಹೊನ್ನು ಸಿಕ್ಕೀತು. ಆ ಹಣವನ್ನು ಕೊಟ್ಟು ಎರಡು ಆಡುಗಳನ್ನು ಕೊಂಡುಕೊಳ್ಳುವುದು. ಅವು ಆರು ತಿಂಗಳಿಗೆ ಮರಿ ಹಾಕುವುದರಿಂದ ಕೆಲವು ವರ್ಷಗಳಲ್ಲಿ ಒಂದು ಹಿಂಡು ಆಗುತ್ತವೆ. ಆ ಹಿಂಡು ಮಾರಿ ಒಂದು ಒಳ್ಳೆಯ ದೊಡ್ಡ ಹಸುವನ್ನು ಕೊಂಡು ಕೊಳ್ಳುವುದು: ಜೊತೆಗೆ ಒಂದು ಎಮ್ಮೆಯನ್ನೂ ಕೊಳ್ಳುವುದು. ಜೊತೆಗೆ ಒಂದು ಹೆಣ್ಣು ಕುದುರೆಯನ್ನು ಕೊಂಡುಕೊಳ್ಳುವುದು. ಇವೆಲ್ಲವೂ ಈದು ಅವೆಲ್ಲವೂ ದೊಡ್ಡವಾದ ಮೇಲೆ ಅವುಗಳನ್ನು ಮಾರಿದರೆ ಬೇಕಾದಷ್ಟು ಚಿನ್ನವು ಸಿಕ್ಕುವುದು. ಆ ಚಿನ್ನದಿಂದ ಒಂದು ತೊಟ್ಟಿಯ ಮನೆಯನ್ನು ಕೊಂಡುಕೊಳ್ಳುವುದು.

ಆಗ ಯಾವನಾದರೂ ಒಬ್ಬನು ಯೋಗ್ಯನು ಬಂದು ರೂಪವತಿಯಾದ ತನ್ನ ಮಗಳನ್ನು ಬಲವಂತ ಮಾಡಿ ನನಗೆ ಕೊಡುವನು. ಅವಳಲ್ಲಿ ಒಂದು ಗಂಡು ಮಗುವಾಗುವುದು. ಆ ಮಗುವಿಗೆ ಸೋಮಶರ್ಮ ಎಂದು ಹೆಸರು ಇಡುವೆನು. ಆ ಮಗವು ಅಂಬೆಗಾಲು ಇಡುವಷ್ಟು ಆಗುವುದು. ಅದು ನಾನು ಒಂದು ದಿವಸ ಅಶ್ವ ಶಾಲೆಯ ಬಳಿ ಪುಸ್ತಕವನ್ನು ಹಿಡಿದು ಓದುತ್ತಾ ಕುಳಿತಿದ್ದರೆ ನನ್ನನ್ನು ಕಂಡು ಅಂಬೆಗಾಲಿಕ್ಕಿಕೊಂಡು ನನ್ನ ಕಡೆಗೆ ಬರುವುದು. ಆಗ ನಾನು ಮಗುವು ಕುದುರೆಯ ಕಾಲಿಗೆ ಸಿಕ್ಕಿದರೆ ಏನು ಗತಿ? ಎಂದು ಕೋಪಗೊಂಡು, ಮಗುವಿನ ತಾಯನ್ನು ಕೂಗಿ ಮಗುವನ್ನು ಎತ್ತಿಕೋ ಎಂದು ಗದುರುವೆನು. ಅವಳು ಏನೋ ಮನೆಗೆಲಸ ಮಾಡುತ್ತಿದ್ದು ನನ್ನ ಮಾತು ಅವಳಿಗೆ ಕೇಳಿಸದೆ ಹೋಗುವುದು. ಆಗ ನಾನು ಎದ್ದು ಹೋಗಿ ಅವಳನ್ನು ಹೀಗೆ ಝಾಡಿಸಿ ಒದೆಯುವೆನು.

ಹೀಗೆ ಯೋಚನೆ ಮಾಡುತ್ತ ಮಾಡುತ್ತ ಅವನಿಗೆ ಮೈಮರೆತು ಹೋಗಿತ್ತು. ನಿಜವಾಗಿಯೂ ಹೆಂಡತಿಯನ್ನು ಒದೆಯುವವನಂತೆ ಝಾಡಿಸಿ ಒದ್ದೇ ಒದ್ದನು. ಆ ಒದೆತವು ಮಡಿಕೆಗೆ ಬಿತ್ತು ಆ ಮಡಿಕೆಯು ಒಡೆಯಿತು. ಅದರಲ್ಲಿದ್ದ ಹಿಟ್ಟೆಲ್ಲ ಅವನ ಮೇಲೆ ಬಿತ್ತು. ಅದರಿಂದ ಫಲಿಸಿದ ಕಾರ್ಯದ ಫಲವಂ ಚಿಂತಿಸಿ ಮೊದಲಾಗಿ ಹೇಳಿದೆನು ಎಂದನು.



ಸುವರ್ಣಸಿದ್ದಿಯು ನಿಜ ನಿಜ ಇದು ನಿನ್ನ ದೋಷವಲ್ಲ ಸರ್ವರೂ ಲೋಭದಿಂದ ಹಾಗಾಗುವರು– ಕೇಳಲಿಲ್ಲವೆ?

ಫಲವನೆಣಿಸದೆ ಚಪಲ ಮತಿಯಿಂ
ಕೆಲಸ ಮಾಡಲು ಕೇಡು ತಪ್ಪದು ॥
ಚಂದ್ರ, ನರಪನ ನೋಡಿ ಕಲಿಯೈಯ್ಯಾ ॥ 29 ॥

ಚಕ್ರಧರನು ಅದೆಂತು? ಎಂದು. ಕೇಳಲು ಅವನು ಹೇಳಿದನು:–

# ಉರ್ವಿಲ್ ಪಟೇಲ್ ಸ್ಫೋಟಕ ಬ್ಯಾಟಿಂಗ್

## 5ನೇ ಸ್ಥಾನಕ್ಕೇರಿದ ಚೆನ್ನೈ ಸೂಪರ್ ಕಿಂಗ್ಸ್: ಪ್ಲೇ ಆಫ್ ರೇಸ್‌ನಿಂದ ಹೊರ ಬಿದ್ದ ಲಖನೌ ಸೂಪರ್



• ಪ್ರಜೋದಯ ವರದಿ

**ಚೆನ್ನೈ:** ಯುವ ಆಟಗಾರ ಉರ್ವಿಲ್ ಪಟೇಲ್ ಸಿಡಿಸಿದ ಸ್ಫೋಟಕ ಅರ್ಧಶತಕದ ನೆರವಿನಿಂದ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಲಖನೌ ಸೂಪರ್ ಜೈಂಟ್ಸ್ ವಿರುದ್ಧ 5 ವಿಕೆಟ್ ಅಂತರದ ಜಯ ಸಾಧಿಸಿದೆ.

ಎಂ.ಎ.ಚಿದಂಬರಂ ಕ್ರಿಕೆಟ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಲಖನೌ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್‌ಗೆ 203 ರನ್ ಕಲೆಹಾಕಿತ್ತು. ಈ ಗುರಿ ಬೆನ್ನತ್ತಿದ ಚೆನ್ನೈ, 19.2 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 208 ರನ್ ಕಲೆಹಾಕಿತು.

ಇದರೊಂದಿಗೆ ಆಡಿರುವ 11 ಪಂದ್ಯಗಳಲ್ಲಿ 6ನೇ ಜಯ ಸಾಧಿಸಿ ಪಾಯಿಂಟ್ ಪಟ್ಟಿಯಲ್ಲಿ 5ನೇ ಸ್ಥಾನಕ್ಕೇರಿತು. ಆದರೆ, ಇಷ್ಟೇ ಪಂದ್ಯಗಳಲ್ಲಿ 8ನೇ ಸೋಲು ಅನುಭವಿಸಿದ ಲಖನೌ, ಪ್ಲೇ ಆಫ್ ರೇಸ್‌ನಿಂದ ಹೊರಬಿದ್ದಿತು.

ಉರ್ವಿಲ್ ಅಬ್ಬರ

ಸವಾಲಿನ ಮೊತ್ತದೆದುರು ಬ್ಯಾಟಿಂಗ್ ಆರಂಭಿಸಿದ ಚೆನ್ನೈಗೆ ಸಂಜು ಸ್ಯಾಮ್ಸನ್ (28) ಹಾಗೂ ನಾಯಕ ಋತುರಾಜ್ ಗಾಯಕವಾಡ್ (42) ಉತ್ತಮ ಆರಂಭ ನೀಡಿದರು. ಈ ಜೋಡಿ ಮೊದಲ ವಿಕೆಟ್‌ಗೆ ಕೇವಲ 3.4 ಓವ್‌ಗಳಲ್ಲಿ 45 ರನ್ ಸೇರಿಸಿತು.

ನಂತರ ಕ್ರೀಸ್‌ಗೆ ಇಳಿದ ಉರ್ವಿಲ್, ಅಕ್ಷರಶಃ ಅಬ್ಬರಿಸಿದರು. ತಾವೆದುರಿಸಿದ ಮೊದಲ 8 ಎಸೆತಗಳಲ್ಲಿ 6 ಸಿಕ್ಸರ್ ಹಾಗೂ ಒಂದು ಬೌಂಡರಿ ಬಾರಿಸಿದ ಅವರು, 13ನೇ ಎಸೆತದಲ್ಲೇ ಅರ್ಧ ಶತಕದ ಗಡಿ ದಾಟಿದರು. ಇದರೊಂದಿಗೆ ಅವರು, ಐಪಿಎಲ್‌ನಲ್ಲಿ ವೇಗದ ಅರ್ಧಶತಕ ಸಿಡಿಸಿದ ಬ್ಯಾಟರ್ ಎನಿಸಿಕೊಂಡರು. ರಾಜಸ್ಥಾನ ರಾಯಲ್ಸ್ ಆಟವಾರ ಯಶಸ್ವಿ ಜೈಸ್ವಾಲ್ ಅವರೂ 2023ರಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ ಇಷ್ಟೇ ಎಸೆತಗಳಲ್ಲಿ 50 ರನ್‌ಗಳ ಗಡಿ ದಾಟಿದ್ದರು. ಒಟ್ಟು 23 ಎಸೆತಗಳನ್ನು ಎದುರಿಸಿದ ಉರ್ವಿಲ್ 282ರ ಸ್ಟ್ರೈಕ್‌ರೇಟ್‌ನಲ್ಲಿ 65 ರನ್ ಗಳಿಸಿದ್ದಾಗ ಔಟಾದರು.

ಶಿವಂ ದುಬೆ (15) ಮತ್ತು ಪ್ರಶಾಂತ್ ವೀರ್ (18) ಗೆಲುವಿನ ಲೆಕ್ಕಾಚಾರ ಪೂರ್ಣಗೊಳಿಸಿದರು.

ಇದಕ್ಕೂ ಮೊದಲು ಬ್ಯಾಟಿಂಗ್ ಮಾಡಿದ ಲಖನೌಗೆ ಆರಂಭಿಕ ಜೋಶ್ ಇಂಗ್ಲಿಸ್ ಹಾಗೂ ಮಿಚೇಲ್ ಮಾರ್ಷ್ ಬಿರುಸಿನ ಆರಂಭ ಒದಗಿಸಿದ್ದರು. ಈ ಜೋಡಿ ಕೇವಲ 5.1 ಓವರ್‌ಗಳಲ್ಲೇ 77 ರನ್ ಕಲೆಹಾಕಿತು.

6 ಓವರ್‌ಗಳಲ್ಲೇ 1 ವಿಕೆಟ್‌ಗೆ 91 ರನ್ ಕಲೆಹಾಕಿ ಬೃಹತ್ ಮೊತ್ತ ಕಲೆಹಾಕು ಸೂಚನೆ ನೀಡಿದ್ದ ಲಖನೌ, ನಂತರ ವೈಫಲ್ಯ ಅನುಭವಿಸಿತು. ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ಕೈಕೊಟ್ಟದ್ದು ಮುಳುವಾಯಿತು. ಇಂಗ್ಲಿಸ್ 33 ಎಸೆತಗಳಲ್ಲಿ 10 ಬೌಂಡರಿ ಹಾಗೂ 6 ಸಿಕ್ಸರ್ ಸಹಿತ 85 ರನ್ ಗಳಿಸಿದರು.

ಕೆಳಕ್ರಮಾಂಕದಲ್ಲಿ ತಂಡಕ್ಕೆ ಆಸರೆಯಾದ ಶಹಬಾಜ್ ಅಹಮದ್ 25 ಎಸೆತಗಳಲ್ಲಿ ತಲಾ ಮೂರು ಬೌಂಡರಿ ಮತ್ತು ಸಿಕ್ಸರ್ ಸಹಿತ 43 ರನ್ ಕಲೆಹಾಕಿದರು. ಈ ಇಬ್ಬರನ್ನು ಬಿಟ್ಟರೆ, ಉಳಿದವರಿಂದ ಸಾಮರ್ಥ್ಯಕ್ಕೆ ತಕ್ಕ ಆಟ ಮೂಡಿಬರಲಿಲ್ಲ.

ಆರಂಭಿಕ ಹಂತದಲ್ಲಿ ಎಡವಿದರೂ, ನಂತರ ಪುಟಿದೆದ್ದ ಆತಿಥೇಯ ಚೆನ್ನೈ, ಲಖನೌ ಪಡೆಯ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ರಟ್ಟೆ ಅರಳಿಸಲು ಬಿಡಲಿಲ್ಲ. ನಿಕೋಲಸ್ ಪೂರನ್ (1), ನಾಯಕ ರಿಷಭ್ ಪಂತ್ (15), ಏಡನ್ ಮರ್ಕ್ರಂ (6) ವೈಫಲ್ಯ ಅನುಭವಿಸಿದರು. ಹೀಗಾಗಿ, 230ಕ್ಕಿಂತ ಅಧಿಕ ಮೊತ್ತ ಕಲೆಹಾಕುವ ಅವಕಾಶವನ್ನು ಲಖನೌ ಕಳೆದುಕೊಂಡಿತು.

ಚೆನ್ನೈ ಪರ ಉತ್ತಮ ಬೌಲಿಂಗ್ ಮಾಡಿದ ಜೆಮೀ ಓವರ್ಟನ್ 3, ಅನ್ಶುಲ್ ಕಾಂಬೋಜ್ 2, ನೂರ್ ಅಹ್ಮದ್ 1 ವಿಕೆಟ್ ಪಡೆದರು.




## ಪತ್ರಕರ್ತ ಬಿ.ವಿ.ಸುದರ್ಶನ್ ನಿಧನ



**ಸಕಲೇಶಪುರ:** ಅನಾರೋಗ್ಯದಿಂದ ಬಳಲುತ್ತಿದ್ದ ಪತ್ರಕರ್ತ ಬಿ.ವಿ.ಸುದರ್ಶನ್ (44) ಭಾನುವಾರ ನಿಧನರಾಗಿದ್ದಾರೆ.

ಕೆಲವು ದಿನಗಳಿಂದ ಚಿಕಿತ್ಸೆ ಪಡೆಯುತ್ತಿದ್ದ ಅವರು ಚಿಕಿತ್ಸೆ ಫಲಕಾರಿಯಾಗದೆ ಭಾನುವಾರ ಮಧ್ಯಾಹ್ನ ಹಾಸನದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಪತ್ನಿ, ತಂದೆ, ತಾಯಿ, ಸಹೋದ ರರನ್ನು ಇದ್ದಾರೆ. ಸಂಸ್ಕಾರ ಸೋಮವಾರ ಸ್ವ ಗ್ರಾಮ ತಾಲ್ಲೂಕಿನ ಬೊಮ್ಮನಕೆರೆಯಲ್ಲಿ ಮಧ್ಯಾಹ್ನ 3 ಗಂಟೆಗೆ ನಡೆಯಲಿದೆ.

## ಹೈಕಮಾಂಡ್ ನಿರ್ಧಾರ ಒಪ್ಪಿಕೊಳ್ಳುವುದು ಕಾರ್ಯಕರ್ತ ಜವಾಬ್ದಾರಿ

• ಪ್ರಜೋದಯ ವರದಿ

**ತಿರುವನಂತಪುರ:** ಕೇರಳಂನ ಮುಖ್ಯಮಂತ್ರಿ ಯಾರಾಗಬೇಕೆಂದು ಹೈಕಮಾಂಡ್ ನಿರ್ಧರಿಸಿದಾಗ ಪಕ್ಷದ ಎಲ್ಲಾ ಕಾರ್ಯಕರ್ತರು ಇದನ್ನು ಒಪ್ಪಿಕೊಳ್ಳಲೇಬೇಕೆಂದು ಕಾಂಗ್ರೆಸ್ ನಾಯಕ ಕೆ.ಮುರಳೀಧರನ್ ಭಾನುವಾರ ಹೇಳಿದರು.

ಮುಖ್ಯಮಂತ್ರಿ ಯಾರಾಗುತ್ತಾರೆ ಎಂಬ ಬಗ್ಗೆ ನಡೆಯುತ್ತಿರುವ ಚರ್ಚೆಯ ಕುರಿತು ಪತ್ರಕರ್ತರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಮುಖ್ಯಮಂತ್ರಿ ಆಯ್ಕೆಯ ಮುನ್ನ ಚರ್ಚೆಯು ನಮ್ಮ ಪಕ್ಷದಲ್ಲಿ ಸಾಮಾನ್ಯ ಪ್ರಕ್ರಿಯೆ. ನಿರ್ಧಾರ ಹೊರಬರಲಿ. ಈ ನಿರ್ಧಾರವನ್ನು ಒಪ್ಪಿಕೊಳ್ಳುವುದು ಪಕ್ಷದ ಪ್ರತಿಯೊಬ್ಬ ಕಾರ್ಯಕರ್ತನ ಜವಾಬ್ದಾರಿ ಎಂದರು.

ಕಾಂಗ್ರೆಸ್‌ನಲ್ಲಿ ಹೊಸ ಪೀಳಿಗೆಯ ನಾಯಕತ್ವ ಉದಯಿಸುತ್ತಿದೆ. ಈ ಹೊತ್ತಿನಲ್ಲಿ ವಿವಾದ ಏಳುವುದು ಸಹಜ. ಕೆ.ಕರುಣಾಕರನ್, ಉಮ್ಮನ್ ಚಾಂಡಿ ಮತ್ತು ಎ.ಕೆ.ಆ್ಯಂಟನಿ ಅವರ ಕಾಲಘಟ್ಟದಲ್ಲಿ ವಿವಾದ ಇರಲಿಲ್ಲ. ಏಕೆಂದರೆ, ಅವರ ನಾಯಕತ್ವ ಹಾಗಿತ್ತು. ಈಗ ಹೊಸ ನಾಯಕರು ಬಂದಿದ್ದಾರೆ. ಅಭಿಪ್ರಾಯ ಭೇದ ಇದ್ದೇ ಇರುತ್ತದೆ. ಆದರೆ, ಕಾಂಗ್ರೆಸ್ ಇವೆಲ್ಲ ವನ್ನೂ ಪರಿಹರಿಸಲಿದೆ ಎಂದು ಹೇಳಿದರು.

ಎಲ್ಲಾ ಶಾಸಕರ ಮತ್ತು ಹಿರಿಯ ನಾಯಕರ ಅಭಿಪ್ರಾಯ ಸಂಗ್ರಹಿಸಲಾಗುತ್ತದೆ. ಅಂತಿಮ ಹೈಕಮಾಂಡ್ ನಿರ್ಧಾರವನ್ನು ತೆಗೆದುಕೊಳ್ಳುತ್ತದೆ. ಇದು ಪಕ್ಷದ ಪರಂಪರೆ. ಇನ್ನೆರಡು ದಿನಗ ಳಲ್ಲಿ ಅಂತಿಮ ನಿರ್ಧಾರ ಹೊರಬೀಳಲಿದೆ ಎಂದರು.

## ವಿಜಯ್ ಪ್ರಮಾಣ ವಚನದ ವೇಳೆ ನಾಡಗೀತೆಗೆ ಮೊದಲು ವಂದೇ ಮಾತರಂ ಗಾಯನ

**ಚೆನ್ನೈ:** ಟಿವಿಕೆ ಮುಖ್ಯಸ್ಥ, ನಟ ವಿಜಯ್ ಅವರು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಸಮಾರಂಭದಲ್ಲಿ ವಂದೇ ಮಾತರಂ ಹಾಡಿದ ಬಳಿಕ ನಾಡಗೀತೆ ತಮಿಳ್ ತಾಯ್ ವಾಳ್ತು ಅನ್ನು ಹಾಡಿದ್ದಕ್ಕೆ ಟಿವಿಕೆ ಮಿತ್ರ ಪಕ್ಷ ಸಿಪಿಐ ಆಕ್ಷೇಪ ವ್ಯಕ್ತಪಡಿಸಿದೆ. ಸರ್ಕಾರಿ ಸಮಾರಂಭಗಳ ಶಿಷ್ಟಾಚಾರದಲ್ಲಿ ನಾಡಗೀತೆಗೆ ಪ್ರಮುಖ ಸ್ಥಾನ ನೀಡಬೇಕೆಂದು ಸಿಪಿಐ ರಾಜ್ಯ ಕಾರ್ಯದರ್ಶಿ ಎಂ. ವೀರಪಾಂಡ್ಯನ್ ಒತ್ತಾಯಿಸಿದ್ದಾರೆ.

ಜೋಸೆಫ್ ಸಿ. ವಿಜಯ್ ಅವರು ತಮಿಳುನಾಡಿನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಸಮಾರಂಭದಲ್ಲಿ ವಂದೇ ಮಾತರಂ ಅನ್ನು ಮೊದಲು, ನಂತರ ರಾಷ್ಟ್ರಗೀತೆ ಜನ ಗಣ ಮನ ಮತ್ತು ನಾಡ ಗೀತೆ ತಮಿಳ್ ತಾಯ್ ವಾಳ್ತು ಅನ್ನು 3ನೇ ಸ್ಥಾನದಲ್ಲಿ ಹಾಡಿಸಲಾಯಿತು. ಸಮಾರಂಭದಲ್ಲಿ ನಾಡಗೀತೆಗೆ 3ನೇ ಸ್ಥಾನ ನೀಡಲಾಯಿತು. ವಂದೇ ಮಾತರಂ ಮತ್ತು ರಾಷ್ಟ್ರಗೀತೆಗೆ ಕ್ರಮವಾಗಿ ಮೊದಲ ಮತ್ತು 2ನೇ ಸ್ಥಾನ ನೀಡಲಾಗಿತ್ತು ಎಂದು ಅವರು ಹೇಳಿದ್ದಾರೆ.

## ಎಂ.ಎಸ್.ಧೋನಿ ದಾಖಲೆ ಸರಿಗಟ್ಟಿದ ರೋಹಿತ್ ಶರ್ಮಾ-ವಿರಾಟ್ ಕೊಹ್ಲಿ

• ಪ್ರಜೋದಯ ವರದಿ

**ರಾಯ್ಪುರ:** ಐಪಿಎಲ್ ಟೂರ್ನಿಯ ಭಾನುವಾರದ 2ನೇ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಮುಂಬೈ ಇಂಡಿಯನ್ಸ್ ತಂಡ ಮುಖಾಮುಖಿಯಾಗಿದೆ.

ಈ ಹೈವೋಲ್ಟೇಜ್ ಪಂದ್ಯದಲ್ಲಿ ಹಿಟ್ ಮ್ಯಾನ್ ರೋಹಿತ್ ಶರ್ಮಾ ಮತ್ತು ರನ್ ಮೆಷಿನ್ ವಿರಾಟ್ ಕೊಹ್ಲಿ ಮಾಜಿ ನಾಯಕ ಎಂ.ಎಸ್.ಧೋನಿ ಅವರ ಅತಿದೊಡ್ಡ ದಾಖಲೆ ಸರಿಗಟ್ಟಿದ್ದಾರೆ.

ರಾಯ್ಪುರದ ಶಹೀದ್ ವೀರ್ ನಾರಾಯಣ ಸಿಂಗ್ ಕ್ರಿಕೆಟ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ರೋ-ಕೋ ಜೋಡಿ ಈ ಸಾಧನೆ ಮಾಡಿದ್ದು, ಇದು ಅನುಭವಿ ಆಟಗಾರರಾದ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರ 278ನೇ ಐಪಿಎಲ್ ಪಂದ್ಯವಾಗಿದೆ.

ಈ ಮೂಲಕ ಅವರು ಧೋನಿ ಅವರ ಅತಿ ಹೆಚ್ಚು ಐಪಿಎಲ್ ಪಂದ್ಯಗಳನ್ನು ಆಡಿದ ದಾಖಲೆಯನ್ನು ಈ ಜೋಡಿ ಏಕಕಾಲದಲ್ಲಿ ಸರಿಗಟ್ಟಿದ್ದಾರೆ.



**ಮತ್ತೊಂದು ದಾಖಲೆ ಸನಿಹದಲ್ಲಿ ಕೊಹ್ಲಿ**

ಅಂತೆಯೇ ಆರ್‌ಸಿಬಿಯ ಸೂಪರ್ ಸ್ಟಾರ್ ಆಟಗಾರ ವಿರಾಟ್ ಕೊಹ್ಲಿ ಇದೀಗ ಮತ್ತೊಂದು ದಾಖಲೆಯತ್ತ ದಾಪುಗಾಲಿರಿಸಿದ್ದು ಐತಿಹಾಸಿಕ ದಾಖಲೆ ಮುರಿಯಲು ಕೆಲವೇ ರನ್ ಗಳ ಸನಿಹದಲ್ಲಿದ್ದಾರೆ.

ವಿರಾಟ್ ಕೊಹ್ಲಿ ಅವರು ಐಪಿಎಲ್‌ನಲ್ಲಿ ಮುಂಬೈ ಇಂಡಿಯನ್ಸ್ ವಿರುದ್ಧ 1,000 ರನ್ ಪೂರೈಸಿದ ಮೊದಲ ಆಟಗಾರನಾಗಲು ಕೇವಲ 28 ರನ್ ಗಳ ಅವಶ್ಯಕತೆಯಿದೆ.

ಅಂದ ಹಾಗೆ 34 ಪಂದ್ಯಗಳಲ್ಲಿ ಕೊಹ್ಲಿ, ಐದು ಬಾರಿ ಚಾಂಪಿಯನ್ ಆಗಿರುವ ಮುಂಬೈ ಇಂಡಿಯನ್ಸ್ ವಿರುದ್ಧ 32.4 ಸರಾಸರಿಯಲ್ಲಿ 972 ರನ್ ಗಳಿಸಿದ್ದಾರೆ.

## ಉ.ಪ್ರದೇಶ ಸಂಪುಟ ಪುನಾರಚನೆ: 6 ಹೊಸ ಸಚಿವರ ಸೇರ್ಪಡೆ

• ಪ್ರಜೋದಯ ವರದಿ

**ಲಖನೌ:** ಉತ್ತರ ಪ್ರದೇಶದಲ್ಲಿ 2027 ರ ವಿಧಾನಸಭಾ ಚುನಾವಣೆಗೆ ಮುನ್ನ ಭಾನುವಾರ ಯೋಗಿ ಆದಿತ್ಯನಾಥ್ ಸರ್ಕಾರದ ಸಚಿವ ಸಂಪುಟ ವಿಸ್ತರಣೆಯಾಗಿದ್ದು, ನಾಲ್ವರು ಹೊಸ ಸಚಿವರನ್ನು ಸೇರಿಸಿಕೊಳ್ಳಲಾಗಿದೆ. ಇಬ್ಬರು ರಾಜ್ಯ ಸಚಿವರಿಗೆ ಸ್ವತಂತ್ರ ಹುದ್ದೆಗಳಿಗೆ ಬಡ್ತಿ ನೀಡಲಾಗಿದೆ.

2022 ರಲ್ಲಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಇದು ಎರಡನೇ ಸಂಪುಟ ವಿಸ್ತರಣೆಯಾಗಿದೆ. ಮೊದಲ ಸಂಪುಟ ವಿಸ್ತರಣೆ ಮಾರ್ಚ್ 2024 ರಲ್ಲಿ ನಡೆದಿತ್ತು.

ಜನಭವನದಲ್ಲಿ ನಡೆದ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ, ಬಿಜೆಪಿಯ ಮಾಜಿ ರಾಜ್ಯ ಅಧ್ಯಕ್ಷ ಭೂಪೇಂದ್ರ ಚೌಧರಿ ಮತ್ತು ಎಸ್‌ಪಿ ಬಂಡಾಯಗಾರ ಮನೋಜ್ ಪಾಂಡೆ ಅವರನ್ನು ಸಂಪುಟ ಸಚಿವರನ್ನಾಗಿ ನೇಮಿಸಲಾಗಿತ್ತು. ರಾಜ್ಯ ಸಚಿವರಾದ ಅಜಿತ್ ಪಾಲ್ ಸಿಂಗ್ ಮತ್ತು ಸೋಮೇಂದ್ರ ತೋಮರ್ ಅವರನ್ನು ಸ್ವತಂತ್ರ ಉಸ್ತುವಾರಿ ಹೊಂದಿರುವ ರಾಜ್ಯ ಸಚಿವ ಸ್ಥಾನಕ್ಕೆ ಬಡ್ತಿ ನೀಡಲಾಯಿತು.

ಕೃಷ್ಣ ಪಾಸ್ವಾನ್, ಸುರೇಂದ್ರ ದಿಲೇರ್, ಹಂಸ ರಾಜ್ ವಿಶ್ವಕರ್ಮ ಮತ್ತು ಕೈಲಾಶ್ ರಜಪೂತ್ ಪ್ರಮಾಣ ವಚನ ಸ್ವೀಕರಿಸಿದ ನಾಲ್ಕು ಹೊಸ ರಾಜ್ಯ ಸಚಿವರಾಗಿದ್ದಾರೆ. ರಾಜ್ಯಪಾಲ ಆನಂದಿ ಬೆನ್ ಪಟೇಲ್ ಹೊಸದಾಗಿ ನೇಮಕಗೊಂಡ ಸಚಿವರಿಗೆ ಪ್ರಮಾಣ ವಚನ ಬೋಧಿಸಿದರು.



ಮೊದಲ ಸಂಪುಟ ವಿಸ್ತರಣೆಯಲ್ಲಿ ಮೈತ್ರಿ ಕೂಟದ ಪಾಲುದಾರ ಮತ್ತು ಎಸ್‌ಬಿಎಸ್‌ಪಿ ಮುಖ್ಯಸ್ಥ ಓಂ ಪ್ರಕಾಶ್ ರಾಜ್‌ಭರ್, ಆರ್‌ಎಲ್‌ಡಿಯ ಅನಿಲ್ ಕುಮಾರ್, ಸುನಿಲ್ ಕುಮಾರ್ ಶರ್ಮಾ ಮತ್ತು ಎಸ್‌ಪಿಯಿಂದ ಬಿಜೆಪಿಗೆ ಮರಳಿದ ದಾರಾ ಸಿಂಗ್ ಚೌಹಾಣ್ ಅವರನ್ನು ಸೇರಿಸಿ ಕೊಳ್ಳಲಾಯಿತು. ಉತ್ತರ ಪ್ರದೇಶ ವಿಧಾನಸಭೆಯಲ್ಲಿ ಒಟ್ಟು 403 ಸದಸ್ಯರ ಬಲದೊಂದಿಗೆ ಸಚಿವ ಸಂಪುಟದ ಗರಿಷ್ಠ ಗಾತ್ರ 60 ಆಗಿರಬಹುದು.

ಈ ವಿಸ್ತರಣೆಯ ಮೊದಲು 54 ಮಂತ್ರಿಗಳಿದ್ದರು, ಆರು ಸ್ಥಾನಗಳು ಖಾಲಿ ಉಳಿದಿತ್ತು. ವಿಧಾನ ಪರಿಷತ್ತಿನ (ಎಂಎಲ್‌ಸಿ) ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಿದ ಮತ್ತು ಯೋಗಿ ಅವರ ಮೊದಲ ಸರ್ಕಾರದ ಭಾಗವಾಗಿದ್ದ ಭೂಪೇಂದ್ರ ಚೌಧರಿ ಅವರನ್ನು 2022 ರಲ್ಲಿ ಪಕ್ಷವು ಅಧಿಕಾರಕ್ಕೆ ಮರಳಿದ ನಂತರ ಉಳಿಸಿಕೊಳ್ಳಲಾಯಿಗಿತ್ತು. ಆದಾಗ್ಯೂ, ಅವರ ಸೇರ್ಪಡೆಯ ನಂತರ ಅವರು ಯುಪಿ ಬಿಜೆಪಿ ಮುಖ್ಯಸ್ಥರ ಹುದ್ದೆಯಿಂದ ಕೆಳಗಿಳಿದರು.

ಅವರ ನಾಯಕತ್ವದಲ್ಲಿ ಬಿಜೆಪಿ ರಾಜ್ಯದಲ್ಲಿ 2024ರ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿತು. ಚೌಧರಿ ಅವರ ಸೇರ್ಪಡೆಯನ್ನು ರಾಜಕೀಯವಾಗಿ ನಿರ್ಣಾಯಕ ಪಶ್ಚಿಮ ಯುಪಿಯಲ್ಲಿ ಜಾಟ್ ಸಮುದಾಯವನ್ನು ತಲುಪಲು ಬಿಜೆಪಿ ಮಾಡಿದ ಪ್ರಯತ್ನವೆಂದು ಗ್ರಹಿಸಲಾಗಿದೆ.

ಉತ್ತರ ಪ್ರದೇಶ ವಿಧಾನಸಭೆಯಲ್ಲಿ ಈಗ ಸಂಪರ್ಕ ಕಳೆದುಕೊಂಡಿರುವ ಎಸ್‌ಪಿ ಬಂಡಾಯಗಾರ ಮನೋಜ್ ಪಾಂಡೆ, 2022 ರ ವಿಧಾನಸಭಾ ಚುನಾವಣೆಯಲ್ಲಿ ರಾಯ್‌ಬರೇಲಿ ಜಿಲ್ಲೆಯ ಉಂಚಹಾರ್ ವಿಧಾನಸಭಾ ಸ್ಥಾನದಿಂದ ಗೆದ್ದಿದ್ದಾರೆ.

ಬ್ರಾಹ್ಮಣ ಸಮುದಾಯದಿಂದ ಬಂದಿರುವ ಮೂರು ಬಾರಿ ಶಾಸಕರಾಗಿರುವ ಪಾಂಡೆ, ಈ ಹಿಂದೆ ಅಖಿಲೇಶ್ ಯಾದವ್ ಸರ್ಕಾರದಲ್ಲಿ ಸಚಿವರಾಗಿ ಸೇವೆ ಸಲ್ಲಿಸಿದ್ದರು ಮತ್ತು ಕಳೆದ ರಾಜ್ಯಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗೆ ಮತ ಹಾಕಿದ್ದರು.

ಬಡ್ತಿ ಪಡೆದ ರಾಜ್ಯ ಸಚಿವರಲ್ಲಿ, ಸೋಮೇಂದ್ರ ತೋಮರ್ ಈ ಹಿಂದೆ ಇಂಧನ ಖಾತೆ ರಾಜ್ಯ ಸಚಿವ ಸ್ಥಾನವನ್ನು ಹೊಂದಿದ್ದರು, ಆದರೆ ಅಜಿತ್ ಪಾಲ್ ಸಿಂಗ್ ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ರಾಜ್ಯ ಸಚಿವರಾಗಿ ಸೇವೆ ಸಲ್ಲಿಸಿದ್ದರು. ಹೊಸ ರಾಜ್ಯ ಸಚಿವರಲ್ಲಿ ಪಾಸಿ ಸಮುದಾಯಕ್ಕೆ (ದಲಿತ) ಸೇರಿದ ಕೃಷ್ಣ ಪಾಸ್ವಾನ್, ಫತೇಪುರ್ ಜಿಲ್ಲೆಯ ಖಾಗಾ ವಿಧಾನಸಭಾ ಸ್ಥಾನವನ್ನು ಪ್ರತಿನಿಧಿಸುತ್ತಿದ್ದು ನಾಲ್ಕು ಬಾರಿ ಶಾಸಕರಾಗಿದ್ದಾರೆ. ಅವರು ಫತೇಪುರ್ ಜಿಲ್ಲಾ ಬಿಜೆಪಿ ಅಧ್ಯಕ್ಷೆ, ಮಾಜಿ ರಾಜ್ಯ ಉಪಾಧ್ಯಕ್ಷೆ ಮತ್ತು ಎಸ್‌ಸಿ ಮೋರ್ಚಾದ ರಾಷ್ಟ್ರೀಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ.

ಮತ್ತೊಬ್ಬ ಹೊಸ ರಾಜ್ಯ ಸಚಿವ ಸುರೇಂದ್ರ ದಿಲೇರ್, ವಾಲ್ಮೀಕಿ (ದಲಿತ) ಸಮುದಾಯಕ್ಕೆ ಸೇರಿದವರು ಮತ್ತು ಅಲಿಗಢದ ಖೈರ್‌ನ ಶಾಸಕರಾಗಿದ್ದಾರೆ. ಹಿಂದಿನ ಸ್ಥಾನ ಹೊಂದಿದ್ದ ಬಿಜೆಪಿಯ ಅನುಪ್ ವಾಲ್ಮೀಕಿ ಲೋಕಸಭೆಗೆ ಬಡ್ತಿ ಪಡೆದ ನಂತರ 2024 ರಲ್ಲಿ ನಡೆದ ಉಪ ಚುನಾವಣೆಯಲ್ಲಿ ದಿಲೇರ್ ಗೆದ್ದಿದ್ದರು.

## ಉಡಸಲಮ್ಮ-ದುರ್ಗಾಪರಮೇಶ್ವರಿ ರಜತ ಮಹೋತ್ಸವ



• ಪ್ರಜೋದಯ ವರದಿ

**ಹೊಳೆನರಸೀಪುರ:** ತಾಲ್ಲೂಕಿನ ಹರಿಹರಪುರದಲ್ಲಿ ಉಡಸಲಮ್ಮ, ದುರ್ಗಾಪರಮೇಶ್ವರಿ ರಜತ ಮಹೋತ್ಸವ ಹಾಗೂ ಶತ ಚಂಡಿಕಾ ಯಾಗ ವೈಭವದಿಂದ ನಡೆಯಿತು.

ಹರಿಹರಪುರ ಸುತ್ತಮುತ್ತಲಿನ ಏಳು ಹಳ್ಳಿಗಳ ಜನರು ಒಟ್ಟಾಗಿ ಆಯೋಜಿಸಿದ್ದ ಧಾರ್ಮಿಕ ಕಾರ್ಯಕ್ರಮಗಳ ನೇತೃತ್ವವನ್ನು ಅತೀತಾನಂದ ನಾಥರು ವಹಿಸಿದ್ದರು. ಪ್ರತಿನಿತ್ಯ ಶತ ಚಂಡಿ ಪಾರಾಯಣ, ಲಲಿತಾ ಮಹಾ ತ್ರಿಪುರಸುಂದರಿ ಪಂಚವಿಶತಿ ನಾಮ ಸ್ತೋತ್ರ ಪಠಣೆ, ದೇವಿಗೆ ವಿಶೇಷ ಪೂಜೆ, ಹೂವಿನ ಅಲಂಕಾರ, ದೇವಿ ಮಹಾತ್ಮೆಯ ಉಪನ್ಯಾಸ, ಪ್ರತಿನಿತ್ಯ ಪ್ರಸಾದ ಸೇರಿ ಅನೇಕ ಧಾರ್ಮಿಕ ಪೂಜಾ ವಿಧಿ ವಿಧಾನಗಳು ನಡೆಯಿತು.

ಯಾಗದ ಪೂರ್ಣಾಹುತಿ ದಿನ ತವನಂದಿಯ ವೀರಭದ್ರೇಶ್ವರನ ಉತ್ಸವ, ಬೋರನಹಳ್ಳಿಯ ಬಸವೇಶ್ವರನ ಉತ್ಸವ, ಸಿಗರನಹಳ್ಳಿಯ ಬಾಣದೇವರ ಉತ್ಸವಗಳು ನಡೆದವು. ಪ್ರತಿ ಹಳ್ಳಿಗಳ ಜನರು ಪೂರ್ಣಾಹುತಿಗೆ ವಿಶೇಷ ರೇಷ್ಮೆ ವಸ್ತ್ರ ಸೇವೆ ಸಮರ್ಪಿಸಿದರು. ಯಾಗದ ಪ್ರಸಾದ ಸಿದ್ಧಪಡಿಸಲು ಏಳು ಹಳ್ಳಿಗಳ ಪ್ರತಿಯೊಂದು ಮನೆಯಿಂದಲೂ ಅಕ್ಕಿ ಹಾಗೂ ಬೆಲ್ಲ ಸಂಗ್ರಹಿಸಿ, ಯಾಗ ಪೂಜಾ ಮಹೋತ್ಸವಕ್ಕೆ ನೀಡಿದರು.

ಪ್ರಧಾನ ಸೇವಾರ್ಥರಾದ ಚಂದ್ರಶೇಖರ್, ಪ್ರಶಾಂತ್ ಗೌಡರು ಕುಟುಂಬ ಸಮೇತ ಪೂಜಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು. ಸುತ್ತಲ ಏಳು ಹಳ್ಳಿಗಳ ಭಕ್ತರಿಗೆ ಮಹಾಪ್ರಸಾದ ವ್ಯವಸ್ಥೆ ಕಲ್ಪಿಸಲಾಗಿತ್ತು.

## ಹಿಮಂತ ಬಿಸ್ವಾ ಶರ್ಮಾಗೆ ಸರ್ಕಾರ ರಚಿಸಲು ರಾಜ್ಯಪಾಲರಿಂದ ಆಹ್ವಾನ

• ಪ್ರಜೋದಯ ವರದಿ



**ಗುವಾಹಟಿ:** ಅಸ್ಸಾಂನಲ್ಲಿ ಹೊಸ ಸರ್ಕಾರ ರಚಿಸಲು ಬಿಜೆಪಿ ಶಾಸಕಾಂಗ ಪಕ್ಷದ ನಾಯಕ ಹಿಮಂತ ಬಿಸ್ವಾ ಶರ್ಮಾ ಅವರಿಗೆ ರಾಜ್ಯಪಾಲ ಲಕ್ಷ್ಮಣ್ ಪ್ರಸಾದ್ ಆಚಾರ್ಯ ಭಾನುವಾರ ಆಹ್ವಾನ ನೀಡಿದ್ದಾರೆ.

ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿ ಕೂಟದ ನಾಯಕರು ರಾಜ್ಯಪಾಲ ಆಚಾರ್ಯ ಅವರನ್ನು ಲೋಕ ಭವನದಲ್ಲಿ ಭೇಟಿಯಾಗಿ, ಸರ್ಕಾರ ರಚನೆಗೆ ಹಕ್ಕು ಮಂಡಿಸಿದ್ದರು. ರಾಜ್ಯಪಾಲರು ಅಸ್ಸಾಂನಲ್ಲಿ ಹೊಸ ಸರ್ಕಾರ ರಚಿಸಲು ಡಾ.ಹಿಮಂತ ಬಿಸ್ವಾ ಶರ್ಮಾ ಅವರಿಗೆ ಆಹ್ವಾನ ನೀಡಿದ್ದಾರೆಂದು ಲೋಕ ಭವನ ಹೇಳಿಕೆ ಬಿಡುಗಡೆ ಮಾಡಿದೆ.

ಮೈತ್ರಿಕೂಟದ ನಾಯಕರಾಗಿ ಆಯ್ಕೆಯಾಗಿರುವ ಶರ್ಮಾ ಅವರು ಮುಖ್ಯಮಂತ್ರಿಯಾಗಿ ಮುಂದುವರಿಯಲಿದ್ದಾರೆ. ಶರ್ಮಾ ಮತ್ತು ಅವರ ಸಂಪುಟ ಸೇರುವ ಶಾಸಕರಿಗೆ ರಾಜ್ಯಪಾಲರು ಪ್ರತಿಜ್ಞಾವಿಧಿ ಬೋಧಿಸಲಿದ್ದಾರೆಂದು ಉಲ್ಲೇಖಿಸಲಾಗಿದೆ.

ಪ್ರಮಾಣವಚನ ಸಮಾರಂಭವು ಮೇ 12ರಂದು ನಡೆಯಲಿದ್ದು, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಬಿಜೆಪಿ ಅಧ್ಯಕ್ಷ ನಿತಿನ್ ನಬಿನ್ ಮತ್ತಿತರ ನಾಯಕರು ಪಾಲ್ಗೊಳ್ಳುವ ಸಾಧ್ಯತೆ ಇದೆ.

ಆಗಿನ (2016ರಲ್ಲಿ) ಮುಖ್ಯಮಂತ್ರಿ ಸರ್ಬಾನಂದ ಸೋನವಾಲ್ ನೇತೃತ್ವದಲ್ಲಿ ಎನ್‌ಡಿಎ ಮೈತ್ರಿಕೂಟ ಮೊದಲ ಬಾರಿಗೆ ರಾಜ್ಯದಲ್ಲಿ ಅಧಿಕಾರಕ್ಕೇರಿತ್ತು. ಅದಾದ ನಂತರ ಸತತ ಮೂರನೇ ಬಾರಿಗೆ ಬಿಜೆಪಿ ನೇತೃತ್ವದ ಸರ್ಕಾರ ರಚನೆಯಾಗುತ್ತಿದೆ.

2021ರಲ್ಲಿ ಮೊದಲ ಬಾರಿಗೆ ಮುಖ್ಯಮಂತ್ರಿ ಗಾದಿಗೇರಿದ್ದ ಹಿಮಂತ ಬಿಸ್ವಾ ಶರ್ಮಾ, ರಾಜ್ಯದಲ್ಲಿ ಸತತ 2 ಅವಧಿಗೆ ಮುಖ್ಯಮಂತ್ರಿ ಯಾದ ಕಾಂಗ್ರೆಸ್ಸೇತರ ನಾಯಕ ಎನಿಸಿದ್ದಾರೆ.

126 ಸದಸ್ಯ ಬಲದ ಅಸ್ಸಾಂ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟ 102 ಸ್ಥಾನಗಳನ್ನು ಗೆದ್ದುಕೊಂಡಿದೆ. ಅದರಲ್ಲಿ ಹೆಚ್ಚಿನ (82) ಸ್ಥಾನಗಳು ಬಿಜೆಪಿ ಪಾಲಾಗಿದ್ದು, ಅದರ ಮಿತ್ರ ಪಕ್ಷಗಳಾದ ಎಜಿಪಿ ಮತ್ತು ಬಿಪಿಎಫ್ ತಲಾ 10 ಕ್ಷೇತ್ರಗಳಲ್ಲಿ ಜಯ ಸಾಧಿಸಿವೆ. ಕಾಂಗ್ರೆಸ್ 19 ಕಡೆ ಗೆಲುವು ಸಾಧಿಸಿದೆ.

## ಅಮೇರಿಕಾದ ಮಧ್ಯಪ್ರಾಚ್ಯ ನೆಲೆಗಳ ಮೇಲೆ ದಾಳಿ: ಇರಾನ್ ಎಚ್ಚರಿಕೆ

• ಪ್ರಜೋದಯ ವರದಿ

**ಟೆಹರಾನ್:** ತನ್ನ ಟ್ಯಾಂಕರ್‌ಗಳ ಮೇಲೆ ಅಮೇರಿಕಾ ಗುಂಡಿನ ದಾಳಿ ನಡೆಸಿರುವುದನ್ನು ತೀವ್ರವಾಗಿ ಖಂಡಿಸಿರುವ ಇರಾನ್, ಕೊಲ್ಲಿ ರಾಷ್ಟ್ರಗಳಲ್ಲಿ ಅಮೇರಿಕಾದ ನೆಲೆಗಳ ಮೇಲೆ ಪ್ರತಿದಾಳಿ ನಡೆಸುವುದಾಗಿ ಎಚ್ಚರಿಸಿದೆ. ಈ ಕುರಿತು ಇರಾನ್‌ನ ಮಾಧ್ಯಮಗಳು ವರದಿ ಮಾಡಿವೆ. ಅದರಿಂದಾಗಿ ಉದ್ವಿಗ್ನತೆ ಹೆಚ್ಚಾಗಿದೆ.

ಇರಾನ್‌ನ ಟ್ಯಾಂಕರ್‌ಗಳು ಮತ್ತು ವಾಣಿಜ್ಯ ಹಡಗುಗಳ ಮೇಲೆ ದಾಳಿ ನಡೆಸಿದರೆ ಅದಕ್ಕೆ ಪ್ರತಿಯಾಗಿ ಅಮೇರಿಕಾದ ನೆಲೆಗಳನ್ನು ಗುರಿಯಾಗಿಸಿ ಭೀಕರ ದಾಳಿ ನಡೆಸಬೇಕಾಗುತ್ತದೆ ಎಂದು ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಬೆದರಿಕೆ ಹಾಕಿದೆ.

ಒಮಾನ್ ಕೊಲ್ಲಿಯಲ್ಲಿ ಇರಾನ್ ಧ್ವಜ ಹೊಂದಿದ್ದ ಎರಡು ಟ್ಯಾಂಕರ್‌ಗಳ ಮೇಲೆ ಅಮೇರಿಕಾ ದಾಳಿ ನಡೆಸಿತ್ತು. ಮತ್ತೊಂದೆಡೆ ಅಮೇರಿಕಾ ಮುಂದಿಟ್ಟಿರುವ ಹೊಸ ಪ್ರಸ್ತಾವದ ಕುರಿತು ಇರಾನ್‌ನಿಂದ ಪ್ರತಿಕ್ರಿಯೆಗಾಗಿ ಕಾಯುತ್ತಿದೆ. ಇರಾನ್‌ನ ಉತ್ತರಕ್ಕಾಗಿ ಕಾಯುತ್ತಿದ್ದೇವೆಂದು ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೆ ನೀಡಿದ್ದಾರೆ.



ಹೊರ್ಮುಜ್ ಜಲಸಂಧಿಯಲ್ಲಿ ತೈಲ ಸಾಗಣೆಗೆ ಇರಾನ್ ನಿಯಂತ್ರಣ ಹೇರಿರುವುದು ಒಪ್ಪಲು ಸಾಧ್ಯವಿಲ್ಲ ಎಂದು ಅಮೇರಿಕಾ ಹೇಳಿದೆ. ಆದರೆ, ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಅವರು ಟರ್ಕಿಯ ವಿದೇಶಾಂಗ ಸಚಿವ ಹಕಾದ್ ಫಿದಾನ್ ಜೊತೆಗಿನ ಮಾತುಕತೆ ವೇಳೆ ಅಮೇರಿಕಾದ ವಿಶ್ವಾಸಾರ್ಹತೆಯನ್ನೇ ಪ್ರಶ್ನಿಸಿದ್ದಾರೆ.

ಕೊಲ್ಲಿ ರಾಷ್ಟ್ರಗಳಲ್ಲಿ ಅಮೇರಿಕಾ ಪಡೆಗಳು ನಡೆಸಿರುವ ಸಂಘರ್ಷ, ನಿರಂತರ ಕದನ ವಿರಾಮ ಉಲ್ಲಂಘನೆಯಿಂದ ರಾಜತಾಂತ್ರಿಕ ಮಾರ್ಗದ ಕುರಿತಂತೆ ಅಮೇರಿಕಾ ಹೊಂದಿರುವ ಉದ್ದೇಶ ಹಾಗೂ ಗಂಭೀರತೆಯ ಕುರಿತು ಅನುಮಾನ ಮೂಡಿಸಿದೆ ಎಂದು ಅರಾಘ್ಚಿ ತಿಳಿಸಿದ್ದಾರೆ ಎಂದು ಐಎಸ್‌ಎನ್‌ಎ ಸುದ್ದಿಸಂಸ್ಥೆ ವರದಿ ಮಾಡಿದೆ.

## ಮಾಗಲು ಗ್ರಾಮದಲ್ಲಿ ಹಗಲು ಸುಗ್ಗಿ ಸಂಭ್ರಮ

• ಪ್ರಜೋದಯ ವರದಿ

**ಆಲೂರು:** ತಾಲ್ಲೂಕಿನ ಮಾಗಲು ಗ್ರಾಮದಲ್ಲಿ ಶ್ರೀ ಕೆಂಚಾಂಬಿಕೆ ದೇವಿಯ ಹಗಲು ಸುಗ್ಗಿ ಉತ್ಸವವು ಸಂಭ್ರಮದ ವಾತಾವರಣದಲ್ಲಿ ವಿಜೃಂಭಣೆಯಿಂದ ನಡೆಯಿತು.

ಹರಿಹಳ್ಳಿಯಲ್ಲಿ ನಡೆದಿದ್ದ ಶ್ರೀ ಕೆಂಚಾಂಬಿಕೆ ದೊಡ್ಡಜಾತ್ರೆ, ಸಮಾಪ್ತಿಯಾದ ಬಳಿಕ, ದೇವಿಯ 48 ಹಳ್ಳಿಗಳ ಪೈಕಿ ಒಂದಾದ ಮಾಗಲು ಗ್ರಾಮದ ಕೆಂಚಾಂಬಿಕೆ ಕಟ್ಟೆಯಲ್ಲಿ ವಿಶೇಷ ಪೂಜೆಗಳು ಹಾಗು ಧಾರ್ಮಿಕ ವಿಧಿವಿಧಾನಗಳು ನೆರವೇರಿದವು.

ಗ್ರಾಮದ ಹಿರಿಯರು, ಪಟೇಲರ ಸಮ್ಮುಖದಲ್ಲಿ ನರಹರಿಭಟ್ ಹಾಗು ಸಂಗಡಿಗರ ನೇತೃತ್ವದ ಪುರೋಹಿತವರ್ಗ ಅಭಿಷೇಕ, ಅಲಂಕಾರ, ಪೂಜೆ, ಮಹಾಮಂಗಳಾರತಿ ನೆರವೇರಿಸಿ ದರು. ಬಳಿಕ ದೇವಿಗೆ ಕೆಂಡ ಕೊಂಡ ಸೇವೆ ನಡೆಯಿತು. ಈ ವೇಳೆ ಅನೇಕ ಭಕ್ತರು ಹರಕೆ ಸಲ್ಲಿಕೆಯ ರೂಪದಲ್ಲಿ ಕೆಂಡ ಹಾಯ್ದು ತಮ್ಮ ಭಕ್ತಿ ಸಮರ್ಪಿ ಸಿದರು.

ಉತ್ಸವದ ಅಂಗವಾಗಿ ಗ್ರಾಮದಲ್ಲಿ ಭಕ್ತರ ದಂಡು ಸೇರಿ, ಪೂಜೆ ಹಾಗೂ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಕ್ತಿಭಾವದಿಂದ ಭಾಗವಹಿಸಿದರು.

ಈ ವೇಳೆ ನರಹರಿ ಭಟ್ ಅವರು ಮಾತನಾಡಿ, ಮಾಗಲು ಗ್ರಾಮದಲ್ಲಿ ಕೆಂಚಾಂಬಿಕೆಯು ಹೇಮಾವತಿ ನದಿಯ ಸನಿಹದಲ್ಲಿ ಅನೇಕ ಮರಿ ರಕ್ಕಸರನ್ನು ಸಂಹರಿಸಿದ್ದಾಳೆಂಬ ನಂಬಿಕೆ ಇದೆ. ಸಂಹಾರದ ಬಳಿಕ ದೇವಿ ಬಳಸಿದ್ದ ಬಿಲ್ಲನ್ನು ಎಸೆದಾಗ ಆ ಸ್ಥಳದಲ್ಲಿ ಒಂದು ಕೊಳ ನಿರ್ಮಾಣವಾಯಿತು. ಅದನ್ನು ಇಂದಿಗೂ ಬಿಲ್ಗೊಳ ಎಂದು ಕರೆಯಲಾಗುತ್ತಿದೆ. ಹರಿಹಳ್ಳಿಯಲ್ಲಿ ನೆಲೆಸಿರುವ ಕೆಂಚಾಂಬಿಕೆಯ ಮೂರನೇ ಕಲ್ಯಾಣಿ ಇದಾಗಿದೆ ಎಂದು ಹಿರಿಯರು ಹೇಳುತ್ತಾರೆಂದು ವಿವರಿಸಿದರು.



## ರಕ್ತದಾನದಿಂದ ನೊಂದವರಿಗೆ ನೆರವು: ಬಾಲಕೃಷ್ಣ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತುರ್ತು ಸಂದರ್ಭದಲ್ಲಿ ರಕ್ತದಾನ ಮಾಡುವುದರಿಂದ ನೊಂದವರಿಗೆ ಸಹಾಯವಾಗಲಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಹೇಳಿದರು.

ಪಟ್ಟಣದ ಸರ್ಕಾರಿ ನೌಕರ ಭವನದಲ್ಲಿ ಏರ್ಪಡಿಸಿದ್ದ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ದಿನಾಚರಣೆಯಲ್ಲಿ ಮಾತನಾಡಿದ ಅವರು, ತಾಲ್ಲೂಕು ಕೇಂದ್ರದಲ್ಲಿಯೂ ರಕ್ತದಾನ ಕೇಂದ್ರ ಇರುವುದರಿಂದ ಶೀಘ್ರದಲ್ಲಿ ರಕ್ತದ ನೆರವು ದೊರಕಲಿದೆ. ಈ ಕ್ಷೇತ್ರದಲ್ಲಿ ರೆಡ್‌ಕ್ರಾಸ್ ಸಂಸ್ಥೆ ಹಲವು ವರ್ಷಗಳಿಂದ ಗಣನೀಯ ಸೇವೆ ಮಾಡುತ್ತಿದೆ. ಪ್ರಥಮ ಮತ್ತು ದ್ವಿತೀಯ ಮಹಾ ಯುದ್ಧದಲ್ಲಿ ಗಾಯಾಳುಗಳಿಗೆ ಶುಶ್ರೂಷೆ ಮಾಡಿತು. ಇಡೀ ಪ್ರಪಂಚದಲ್ಲಿ ಸಂಸ್ಥೆ ಸ್ತುತ್ಯಾರ್ಹ ಕೆಲಸವನ್ನು ರೆಡ್‌ಕ್ರಾಸ್ ಸಂಸ್ಥೆ ಮಾಡುತ್ತಿದೆ ಎಂದು ಶ್ಲಾಘಿಸಿದರು.

ನಿಯಮಿತವಾಗಿ ರಕ್ತದಾನ ಮಾಡಿದರೆ ಆರೋಗ್ಯ ಚೆನ್ನಾಗಿರುತ್ತದೆ. ಕಷ್ಟದಲ್ಲಿರುವರಿಗೆ ನೆರವಾಗುತ್ತದೆ. ರಕ್ತದಾನಕ್ಕೆ ಪರ್ಯಾಯ ವಸ್ತು ಇಲ್ಲ ಎಂದು ತಿಳಿಸಿದರು.




ತಹಶೀಲ್ದಾರ್ ಜಿ.ಎಸ್.ಶಂಕರಪ್ಪ ಅವರು ಮಾತನಾಡಿ, ನೊಂದವರಿಗೆ ಸಹಾಯ ಹಸ್ತ ಚಾಚುವ ಮೂಲಕ ಸೇವೆ ಮಾಡುವುದು ಮತ್ತು ಯುದ್ಧದಲ್ಲಿ ಗಾಯಾಳುಗಳಿಗೆ ಶುಶ್ರೂಷೆ ಮಾಡುವುದು ರೆಡ್‌ಕ್ರಾಸ್ ಸಂಸ್ಥೆಯ ಮುಖ್ಯ ಉದ್ದೇಶ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಹೆಚ್.ಹೆಚ್. ಸತೀಶ್, ಜಿಲ್ಲಾ ರೆಡ್‌ಕ್ರಾಸ್ ಸಂಸ್ಥೆ ಸಭಾಪತಿ ಹೆಚ್.ಪಿ. ಮೋಹನ್, ಉಪಸಭಾಪತಿ ವೈ.ಎಸ್.ವೀರಭದ್ರಪ್ಪ, ವಿವೇಕಾನಂದ ಯುವ ಸಂಘಟನೆಯ ಜಿಲ್ಲಾ ಸಂಯೋಜಕ ಎಂ.ಎಚ್.ಯೋಗಾನಾಥ್, ಬಿಜೆಪಿ ಮುಖಂಡ ಸಿ.ಆರ್.ಚಿದಾನಂದ್, ತಾಲ್ಲೂಕು ರೆಡ್‌ಕ್ರಾಸ್ ಸಂಸ್ಥೆಯ ಸಭಾಪತಿ ಹೆಚ್.ಜಿ.ಭರತ್‌ಕುಮಾರ್, ಕಾರ್ಯದರ್ಶಿ ಸಿ.ಎನ್.ಜಬಿವುಲ್ಲಾ ಬೇಗ್, ಖಜಾಂಚಿ ಕಿಶೋರ್ ಕುಮಾರ್, ಪತ್ರಕರ್ತ ಉದಯ ಕುಮಾರ್, ಟಿಎಪಿಸಿಎಂಎಸ್ ನಿರ್ದೇಶಕ ಎಂ.ಆರ್.ಅನಿಲ್‌ಕುಮಾರ್, ತಾಲ್ಲೂಕು ಅಂಗವಿಕಲರ ಸಂಘದ ಅಧ್ಯಕ್ಷ ಸಿ.ಜಿ.ಸೋಮಶೇಖರ್ ಭಾಗವಹಿಸಿದ್ದರು.

### ಕಾಂಗ್ರೆಸ್ ವಿರುದ್ಧ ಕಾರ್ಯಕರ್ತರು, ಮಿತ್ರಪಕ್ಷಗಳು, ಸಾರ್ವಜನಿಕರು ಆಕ್ರೋಶ

# ಕೇರಳಂ ಮುಖ್ಯಮಂತ್ರಿ ಆಯ್ಕೆ ಕಗ್ಗಂಟು

• ಪ್ರಜೋದಯ ವರದಿ

**ತಿರುವನಂತಪುರಂ:** ಕೇರಳಂ ವಿಧಾನಸಭೆ ಚುನಾವಣೆ ಫಲಿತಾಂಶ ಪ್ರಕಟವಾಗಿ ಆರು ದಿನಗಳು ಕಳೆದರೂ, ಮುಖ್ಯ ಮಂತ್ರಿ ಯಾರಾಗಲಿದ್ದಾರೆ ಎಂಬುದನ್ನು ಅಖಿಲ ಭಾರತ ಕಾಂಗ್ರೆಸ್ ಸಮಿತಿ (ಎಐಸಿಸಿ) ಇನ್ನೂ ಅಂತಿಮಗೊಳಿಸಿಲ್ಲ. ಇದು, ಕಾರ್ಯಕರ್ತರು, ಮಿತ್ರ ಪಕ್ಷಗಳು ಮಾತ್ರವಲ್ಲದೆ, ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.



140 ಸದಸ್ಯ ಬಲದ ಕೇರಳಂ ವಿಧಾನ ಸಭಾ ಚುನಾವಣೆಯ ಫಲಿತಾಂಶ ಮೇ 4ರಂದೇ ಪ್ರಕಟವಾಗಿದೆ. ಕಾಂಗ್ರೆಸ್ ನೇತೃತ್ವದ ಯುನೈಟೆಡ್ ಡೆಮಾಕ್ರಟಿಕ್ ಫ್ರಂಟ್ (ಯುಡಿಎಫ್) 102 ಸ್ಥಾನಗಳಲ್ಲಿ ಜಯ ಸಾಧಿಸಿದೆ. ಕಾಂಗ್ರೆಸ್ 63 ಕ್ಷೇತ್ರಗಳಲ್ಲಿ ಗೆಲುವು ಕಂಡಿದೆ. ಆದಾಗ್ಯೂ, ಮುಖ್ಯಮಂತ್ರಿಯನ್ನು ಆಯ್ಕೆ ಮಾಡಲು ಈವರೆಗೆ ಸಾಧ್ಯವಾಗಿಲ್ಲ.

ಸದ್ಯ ಮುಖ್ಯಮಂತ್ರಿ ಗಾದಿ ರೇಸ್‌ನಲ್ಲಿರುವ ಮೂವರು ನಾಯಕರು ಮಾಡಿಕೊಂಡಿರುವ ಮನವಿಯಂತೆ, ಅವರ ಬೆಂಬಲಿಗರು ಪೋಸ್ಟರ್ ಅಭಿಯಾನ ನಡೆಸುವುದನ್ನು ಶನಿವಾರವೇ ನಿಲ್ಲಿಸಿದ್ದಾರೆ. ಆದರೆ, ಸಾಮಾಜಿಕ ವಲಯದಲ್ಲಿ ಆಕ್ರೋಶ ತೀವ್ರಗೊಳ್ಳುತ್ತಿದೆ. ಕಾಂಗ್ರೆಸ್ ವಿರುದ್ಧ ಟೀಕೆಗಳು ಕೇಳಿಬರುತ್ತಿವೆ.

ಪಕ್ಷಕ್ಕೆ ಈಗಾಗಲೇ ಸಾಕಷ್ಟು ಹಾನಿಯಾಗಿದೆ. ಯುಡಿಎಫ್ ಸಾಧಿಸಿರುವ ಐತಿಹಾಸಿಕ ಗೆಲುವಿನ ಪ್ರಭೆ ಪಕ್ಷದ ನಾಯಕರ ಕಚ್ಚಾಟದಿಂದಾಗಿ ಕುಂದಿದೆ. ಮುಖ್ಯಮಂತ್ರಿ ಆಯ್ಕೆ ವಿಳಂಬ ಮುಂದುವರಿದರೆ, ಇನ್ನಷ್ಟು ಹಾನಿಯಾಗುತ್ತದೆಂದು ಸ್ಥಳೀಯ ಕಾಂಗ್ರೆಸ್ ನಾಯಕರು ಅಭಿಪ್ರಾಯಪಟ್ಟಿದ್ದಾರೆ.

ರಾಜ್ಯದಲ್ಲಿ ಮುಂದಿನ ಮುಖ್ಯಮಂತ್ರಿ ಯಾರಾಗಲಿದ್ದಾರೆಂಬುದು ಭಾರಿ ಕುತೂಹಲ ಕೆರಳಿಸಿದೆ. ಆದರೆ, ಈ ವಿಚಾರವಾಗಿ ಆಗುತ್ತಿರುವ ವಿಳಂಬಕ್ಕೆ ಎಐಸಿಸಿ ನಾಯಕರೇ (ಹೈಕಮಾಂಡ್) ಕಾರಣ ಎಂಬ ಅಭಿಪ್ರಾಯ ಸಾರ್ವಜನಿಕ ವಲಯದಲ್ಲಿ ದಟ್ಟವಾಗಿದೆ.

ಕಳೆದ ಐದು ವರ್ಷಗಳಿಂದ ಹಾಗೂ ಚುನಾವಣೆಯಲ್ಲಿ ಯುಡಿಎಫ್ ಅನ್ನು ಮುನ್ನಡೆ ಸಿರುವ ವಿ.ಡಿ.ಸತೀಶನ್ ಅವರು ಮುಖ್ಯಮಂತ್ರಿ ಯಾಗಲಿದ್ದಾ ರೆಂಬ ನಿರೀಕ್ಷೆ ಇತ್ತು. ಹಿಂದಿನ ಸರ್ಕಾರದ ಅವಧಿಯಲ್ಲಿ ವಿರೋಧ ಪಕ್ಷದ ನಾಯಕರೂ ಆಗಿದ್ದ ಅವರಿಗೆ, ಮಿತ್ರ ಪಕ್ಷಗಳ ಬೆಂಬಲವೂ ಇದೆ. ಈ ನಡುವೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಮತ್ತು ಹಿರಿಯ ನಾಯಕ ರಮೇಶ್ ಚೆನ್ನಿತಲ ಅವರು ಪೈಪೋಟಿಗೆ ಇಳಿದಿರುವುದು ಹೈಕಮಾಂಡ್ ಅನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

ಕಾಂಗ್ರೆಸ್ ಶಾಸಕರ ಪೈಕಿ ಹೆಚ್ಚಿನವರು ವೇಣುಗೋಪಾಲ್‌ಗೆ ಬೆಂಬಲ ನೀಡುತ್ತಿದ್ದಾರೆ. ಒಂದು ವೇಳೆ ಅವರೇನಾದರೂ ವಿಧಾನಸಭೆ ಪ್ರವೇಶಿಸುವ ಸಲುವಾಗಿ ಲೋಕಸಭಾ ಸ್ಥಾನಕ್ಕೆ ರಾಜೀನಾಮೆ ನೀಡಿದರೆ, ಅವರು ಪ್ರತಿನಿಧಿಸುತ್ತಿರುವ ಆಲಪ್ಪುಳ ಕ್ಷೇತ್ರವು ಬಿಜೆಪಿ ಪಾಲಾಗುವ ಸಾಧ್ಯತೆ ಇದೆ. ಅದರಿಂದಾಗಿ, ವೇಣುಗೋಪಾಲ್ ಅವರಿಗೆ ಹಿನ್ನಡೆಯಾಗಲಿದೆ ಎಂಬುದಾಗಿ ಮಿತ್ರಪಕ್ಷಗಳ ನಾಯಕರು ಅಂದಾಜಿಸಿದ್ದಾರೆ.

ವೇಣುಗೋಪಾಲ್ ಅವರನ್ನೇ ಮುಖ್ಯಮಂತ್ರಿಯನ್ನಾಗಿ ಆಯ್ಕೆ ಮಾಡಿದರೆ, ಕೇರಳಂ ಕಾಂಗ್ರೆಸ್ ಸಂಸದರ ಅಸಮಾಧಾನ ಸ್ಫೋಟಗೊಳ್ಳಬಹುದು. ಸಂಸದರು ವಿಧಾನಸಭಾ ಚುನಾ ವಣೆಯಲ್ಲಿ ಸ್ಪರ್ಧಿಸಬಾರದೆಂದು ಸೂಚಿಸಿದ್ದ ಎಐಸಿಸಿ ನಾಯಕರು, ಚುನಾವಣೆಯಲ್ಲಿ ಸ್ಪರ್ಧಿಸುವ ನಿಟ್ಟಿನಲ್ಲಿ ಹಲವರು ಮಾಡಿದ್ದ ಮನವಿಯನ್ನು ತಿರಸ್ಕರಿಸಿದ್ದರು.

ವೇಣುಗೋಪಾಲ್ ಮತ್ತು ಸತೀಶನ್ ಅವರು ಪಟ್ಟು ಬಿಗಿಗೊಳಿಸುತ್ತಿರುವುದರ ನಡುವೆ ರಮೇಶ್ ಚೆನ್ನಿತಲ ಅವರಿಗೆ ಲಾಭವಾದರೂ ಅಚ್ಚರಿಯೇನಿಲ್ಲ ಎಂಬುದಾಗಿ ಕಾಂಗ್ರೆಸ್ ಮೂಲಗಳು ತಿಳಿಸಿವೆ. ಚೆನ್ನಿತಲ ಅವರು, ಈ ಹಿಂದೆ ವಿಧಾನಸಭೆ ವಿರೋಧ ಪಕ್ಷದ ನಾಯಕರಾಗಿದ್ದರು.

# ಪತ್ರಕರ್ತರು-ಅಧಿಕಾರಿಗಳ ಕ್ರಿಕೆಟ್ ಸಮ್ಮಿಲನ ಯಶಸ್ವಿ




» **ಮೊದಲನೇ ಪುಟದಿಂದ**

ಇದಕ್ಕೂ ಮುನ್ನ ಮಾತನಾಡಿದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಇಷ್ಟೊಂದು ತಂಡಗಳನ್ನು ಒಗ್ಗೂಡಿಸಿ ಯಶಸ್ವಿ ಪಂದ್ಯಾವಳಿ ನಡೆಸುವುದು ಸುಲಭದ ಕೆಲಸವಲ್ಲ. ಮೊದಲ ಪ್ರಯತ್ನದಲ್ಲೇ ಉತ್ತಮ ಆಯೋಜನೆ ಮಾಡಿದ ಸಂಘದ ಪದಾಧಿಕಾರಿಗಳು ಅಭಿನಂದನಾರ್ಹರು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಬ್ಯಾಂಕ್ ನೌಕರರ ಸಂಘದ ಪರಮಶಿವಯ್ಯ, ಜಿಲ್ಲಾ ಪತ್ರಕರ್ತರ ಸಂಘದ ಉಪಾಧ್ಯಕ್ಷರಾದ ಎನ್. ನಂಜುಂಡೇಗೌಡ, ಜಿ. ಪ್ರಕಾಶ್, ಪ್ರಧಾನ ಕಾರ್ಯದರ್ಶಿ ಕೆ.ಜಿ. ಸುರೇಶ್, ಕಾರ್ಯದರ್ಶಿಗಳಾದ ಕೆ.ಎಂ. ಹರೀಶ್, ಖುಷ್ವಂತ್, ಖಜಾಂಚಿ ಬೆಳವಾಡಿ ಪ್ರಕಾಶ್ ಸೇರಿ ಕ್ರೀಡಾ ಸಮಿತಿಯ ಸದಸ್ಯರು ಉಪಸ್ಥಿತರಿದ್ದರು.

## ರಾಷ್ಟ್ರವ್ಯಾಪಿ ಮುಷ್ಕರಕ್ಕೆ ಎಸ್‌ಬಿಐ ನೌಕರರ ಕರೆ

» **ಮೊದಲನೇ ಪುಟದಿಂದ**

ಇಲ್ಲದ ಪರಿಸ್ಥಿತಿ ನಿರ್ಮಾಣವಾಗಿದ್ದು, ಇದರ ಪರಿಣಾಮ ಗ್ರಾಹಕ ಸೇವೆಯ ಮೇಲೂ ಬೀಳುತ್ತಿದೆ. ಜೊತೆಗೆ ನೌಕರರ ಮಾನಸಿಕ ಒತ್ತಡವೂ ಹೆಚ್ಚುತ್ತಿದೆ ಎಂದು ದೂರಿದರು.

ಪ್ರಮುಖ ಬೇಡಿಕೆಗಳಲ್ಲಿ ಬ್ಯಾಂಕಿನ ಸಂದೇಶವಾಹಕರು ಹಾಗು ಶಸ್ತ್ರಸಜಿತ ಭದ್ರತಾ ಸಿಬ್ಬಂದಿಯನ್ನು ತಕ್ಷಣ ನೇಮಕ ಮಾಡುವುದು, 2019ರಿಂದ ಸೇವೆಗೆ ಸೇರಿದ ನೌಕರರಿಗೆ ಒಳಾಂಗಣ ವರ್ಗಾವಣೆ ಸೌಲಭ್ಯ ಜಾರಿಗೆ ತರುವುದು, ಶಾಶ್ವತ ಹುದ್ದೆಗಳ ಹೊರಗುತ್ತಿಗೆ ವ್ಯವಸ್ಥೆಯನ್ನು ಸ್ಥಗಿತಗೊಳಿಸುವುದು, ಬ್ಯಾಂಕಿನೊಳಗಿನ ವೇತನ ಅಸಮಾನತೆಯನ್ನು ನಿವಾರಿಸುವುದು ಹಾಗು ರಾಷ್ಟ್ರೀಯ ಪಿಂಚಣಿ ಯೋಜನೆಯಡಿ ಬರುವ ನೌಕರರಿಗೆ ಪಿಂಚಣಿ ನಿಧಿ ನಿರ್ವಹಣೆಯನ್ನು ಬದಲಾಯಿಸಿಕೊಳ್ಳುವ ಅವಕಾಶ ಕಲ್ಪಿಸಬೇಕೆಂದು ಒತ್ತಾಯಿಸಿದ್ದಾರೆ.

# ಭದ್ರಾ ಮೇಲ್ದಂಡೆ ಯೋಜನೆಗೆ ಸುಧಾಕರ್ ಹೆಸರಿಡಲು ಚಿಂತನೆ

• ಪ್ರಜೋದಯ ವರದಿ

**ಬೆಂಗಳೂರು :** ಭದ್ರ ಮೇಲ್ದಂಡೆ ಯೋಜನೆ ಜಾರಿಗೆ ಸಚಿವರಾದ ಡಿ. ಸುಧಾಕರ್ ಅವರು ಹೋರಾಟ ಮಾಡಿದ್ದರು. ಅವರ ಸ್ಮರಣಾರ್ಥ ನೀರಾವರಿ ಯೋಜನೆಗೆ ಸುಧಾಕರ್ ಅವರ ಹೆಸರಿಡಲು ಆಲೋಚನೆ ಮಾಡಲಾಗುವುದೆಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು.

ಸಚಿವ ಡಿ.ಸುಧಾಕರ್ ನಿಧನದ ಹಿನ್ನಲೆಯಲ್ಲಿ ಸದಾಶಿವನಗರ ನಿವಾಸದಲ್ಲಿ ಭಾನುವಾರ ಮಾಧ್ಯಮ ಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ಇಂದು ನಮ್ಮ ಪಾಲಿಗೆ ಬಹಳ ದುಃಖದ ದಿನ. ನನ್ನ ಆಪ್ತಮಿತ್ರ ಹಾಗೂ ನಮ್ಮ ಸರ್ಕಾರದ ಸಚಿವರಾದ ಡಿ.ಸುಧಾಕರ್ ಅವರು ನಮ್ಮನ್ನು ಅಗಲಿದ್ದಾರೆ. ಕಳೆದ ಒಂದು ತಿಂಗಳ ಹಿಂದೆ ಮಂಡಿ ನೋವಿನ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ಸೇರಿದ್ದರು. ಶಸ್ತ್ರ ಚಿಕಿತ್ಸೆ ನಂತರ ಶ್ವಾಸಕೋಶ ಸೋಂಕಿಗೆ ಒಳಗಾಗಿದ್ದರು, ಪ್ರಜ್ಞೆ ಹೋಗಿತ್ತು. ಈ ಮಧ್ಯೆ ಕೆಲ ದಿನಗಳ ಕಾಲ ಅವರಿಗೆ ಪ್ರಜ್ಞೆ ಮರಳಿತ್ತು. ಹೀಗಾಗಿ ಅವರು ಗುಣಮುಖರಾಗಿ ಮರಳುತ್ತಾರೆಂಬ ವಿಶ್ವಾಸವಿತ್ತು. ವಿದೇಶದಿಂದಲೂ ವೈದ್ಯರನ್ನು ಕರೆಸಿ ಚಿಕಿತ್ಸೆ ನೀಡಲಾಗಿತ್ತು. ಆದರೆ, ಇಂದು ಬೆಳಗಿನ ಜಾವ 3.15ಕ್ಕೆ ಅವರು ಕೊನೆಯುಸಿರೆಳೆದಿದ್ದಾರೆ. ಪ್ರತಿ ನಿತ್ಯ ನಾನು ಅವರ ಕುಟುಂಬ ಸದಸ್ಯರ ಜತೆ ಸಂಪರ್ಕದಲ್ಲಿದ್ದು, ಅವರ ಆರೋಗ್ಯದ ಬಗ್ಗೆ ಮಾಹಿತಿ ಪಡೆಯುತ್ತಿದ್ದೆ ಎಂದರು.



ಇಂದು ಅವರ ಪಾರ್ಥಿವ ಶರೀರವನ್ನು ಹಿರಿಯೂರಿಗೆ ತೆಗೆದುಕೊಂಡು ಹೋಗಲಾಗುತ್ತಿದ್ದು, ಸಂಜೆ ನಂತರ ಚಳ್ಳಕೆರೆಗೆ ತೆಗೆದುಕೊಂಡು ಹೋಗಲಾಗುವುದು. ನಾನು ಜಿಲ್ಲಾಧಿಕಾರಿಯೊಂದಿಗೆ ಚರ್ಚೆ ನಡೆಸಿದ್ದು, ಸೋಮವಾರ ಸಂಜೆ 3 ಗಂಟೆಯ ನಂತರ ಜೈನ ಧರ್ಮದ ವಿಧಿ ವಿಧಾನಗಳ ಪ್ರಕಾರ ಅಂತಿಮ ಕಾರ್ಯ ನಡೆಸಲಾಗುವುದು. ಸರ್ಕಾರದ ಗೌರವದೊಂದಿಗೆ ಅವರಿಗೆ ಅಂತಿಮ ನಮನ ಸಲ್ಲಿಸಲಾಗುವುದು. ಇಂದು ಅವರ ಅಂತಿಮ ಸಂಸ್ಕಾರ ಕಾರ್ಯದಲ್ಲಿ ಭಾಗವಹಿಸುತ್ತೇನೆಂದು ಹೇಳಿದರು.

ಡಿ.ಸುಧಾಕರ್ ಅವರು ನನ್ನ ಜೊತೆ ಬಹಳ ಒಡನಾಟ ಇಟ್ಟುಕೊಂಡಿದ್ದರು. ಬಹಳ ಚಿಕ್ಕ ವಯಸ್ಸು, ಆರೋಗ್ಯವಾಗಿದ್ದರು. ಎಸ್.ಎಂ.ಕೃಷ್ಣ ಅವರ ಕಾಲದಲ್ಲಿ ರಂಗನಾಥ್ ಅವರ ಕ್ಷೇತ್ರದಲ್ಲಿ ಟಿಕೆಟ್ ಕೊಡಿಸಿದ್ದೆ. ನನ್ನ ಜೊತೆ ಮಂತ್ರಿಯಾಗಿ ಕೆಲಸ ಮಾಡಿದ್ದಾರೆ. ಅವರಿಗೆ ಯೋಜನಾ ಮತ್ತು ಮುಜರಾಯಿ ಇಲಾಖೆ ನೀಡಲಾಗಿತ್ತು. ಅವರ ಜೊತೆ ಚರ್ಚೆ ಮಾಡಿ ಮುಜರಾಯಿ ಇಲಾಖೆಯನ್ನು ರಾಮಲಿಂಗಾ ರೆಡ್ಡಿ ಅವರಿಗೆ ನೀಡಲಾಯಿತು. ಮುಖ್ಯಮಂತ್ರಿ ಇದಕ್ಕೆ ಅನುಮತಿ ನೀಡಿದ್ದರೆಂದು ಹೇಳಿದರು.

ಭಾರತ ಜೋಡೋ ಯಾತ್ರೆ ವೇಳೆ ಐದು ದಿನದ ಜವಾಬ್ದಾರಿಯನ್ನು ಅವರೇ ವಹಿಸಿದ್ದರು. ಅವರ ಅಗಲಿಕೆ ವಿಚಾರವನ್ನು ರಾಹುಲ್ ಗಾಂಧಿ ಅವರ ಗಮನಕ್ಕೆ ತರಲಾಗಿದೆ. ರಾಹುಲ್ ಗಾಂಧಿ ಅವರು ಸುಧಾಕರ್ ಅವರ ಕುಟುಂಬದ ಸದಸ್ಯರ ಜೊತೆಗೆ ಮಾತನಾಡಲಿದ್ದಾರೆ.ಸುಧಾಕರ್ ಅವರ ಪಕ್ಷ ನಿಷ್ಠೆ, ತ್ಯಾಗ ಸ್ಮರಿಸುತ್ತೇವೆ. ಶಾಂತಿ ಕಾಪಾಡಬೇಕೆಂದು ನಮ್ಮ ಕಾರ್ಯಕರ್ತರು ಹಾಗೂ ಮುಖಂಡರಿಗೆ ಮನವಿ ಮಾಡುತ್ತೇವೆ. ಸಹಕಾರ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ್ದರು. ಹಾಲಿ ಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿದ್ದರು. ಅವರ ಅಗಲಿಕೆ ನಮ್ಮ ಪಕ್ಷಕ್ಕೆ ದೊಡ್ಡ ನಷ್ಟವಾಗಿದೆ. ಈ ಅಗಲಿಕೆ ನೋವು ಭರಿಸುವ ಶಕ್ತಿಯನ್ನು ನೀಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುವೆ ಎಂದರು.

ಭದ್ರಾ ಯೋಜನೆ ಪೂರ್ಣಗೊಳಿಸಿ ಅದಕ್ಕೆ ಚಾಲನೆ ನೀಡಬೇಕೆಂದು ಬಹಳ ಆಸೆ ಇಟ್ಟುಕೊಂಡಿದ್ದರು. ಈ ಯೋಜನೆಗಾಗಿ ಸಾಕಷ್ಟು ಹೋರಾಟ ಮಾಡಿದ್ದರು. ಅವರ ಅಧ್ಯಕ್ಷತೆಯಲ್ಲಿ ಈ ಯೋಜನೆ ಉದ್ಘಾಟನೆ ಮಾಡಬೇಕು ಎಂದು ಚಿಂತಿಸಿದ್ದೆವು. ಕ್ಷೇತ್ರ ಹಾಗೂ ಜಿಲ್ಲೆಯ ಅಭಿವೃದ್ಧಿ ಬಗ್ಗೆ ಆಸಕ್ತಿ ಹೊಂದಿದ್ದರು. ಎಲ್ಲಾ ವರ್ಗದ ಜನರಿಗೆ ನ್ಯಾಯ ಒದಗಿಸಿಕೊಡುತ್ತಿದ್ದರು. ಪಕ್ಷದ ಸದಸ್ಯತ್ವ ಅಭಿಯಾನ ದಲ್ಲಿ ಅತಿ ಹೆಚ್ಚು ನೋಂದಣಿ ಮಾಡಿ ಸಿದ ಕೀರ್ತಿ ಸುಧಾಕರ್ ಅವರಿಗೆ ಸಲ್ಲುತ್ತದೆ. ರಾಹುಲ್ ಗಾಂಧಿ ಅವರ ಭಾರತ ಜೋಡೋ ಸಂದರ್ಭದಲ್ಲಿ ಮಳೆ ಬಂದು ಅವ್ಯವಸ್ಥೆಯಾದಾಗ ಕಾರ್ಯಕ್ರಮ ಯಶಸ್ಸಿಗೆ ಅವರು ಹಾಗೂ ಅವರ ಕಾರ್ಯಕರ್ತರು ಪಟ್ಟ ಕಷ್ಟ ನೆನೆಯುತ್ತೇವೆಂದು ಹೇಳಿದರು.

### ಹೈಕಮಾಂಡ್ ನಿರ್ದೇಶನ ಪಾಲಿಸುವೆ

ಬೆಂಗಳೂರು : ಪಕ್ಷದ ಹೈಕಮಾಂಡ್ ನಾಯಕರು ಏನಾದರೂ ನಿರ್ದೇಶನ ನೀಡಿದರೆ ನಾನು ಅದನ್ನು ಪಾಲಿಸುವೆ. ತಮಿಳುನಾಡು ರಾಜಕೀಯ ವಿಚಾರ ನನಗೆ ಗೊತ್ತಿಲ್ಲವೆಂದು ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಮಿಳುನಾಡಿನ ಕಾಂಗ್ರೆಸ್ ಶಾಸಕರು ಬೆಂಗಳೂರಿಗೆ ಬಂದಿದ್ದಾರೆಂಬುದು ಸುಳ್ಳು. ಪಕ್ಷದ ನಾಯಕರ ನಿರ್ದೇಶನದಂತೆ ನಾನು ತಮಿಳುನಾಡಿನಲ್ಲಿ ಚುನಾವಣಾ ಪ್ರಣಾಳಿಕೆ ಬಿಡುಗಡೆ, ಪ್ರಚಾರಕ್ಕೆ ಹೋಗಿದ್ದೆ. ಅದಾದ ನಂತರ ನನಗೆ ಯಾವುದೇ ಮಾಹಿತಿ ಇಲ್ಲವೆಂದರು.

ಸಂಪುಟ ಪುನರ್‌ರಚನೆ, ನಾಯಕತ್ವ ಬದಲಾವಣೆ ವಿಚಾರ ತಿಂಗಳಲ್ಲಿ ಬಗೆಹರಿಯಲಿದೆ ಎಂದು ಆಹಾರ ಸಚಿವ ಕೆ.ಹೆಚ್.ಮುನಿಯಪ್ಪ ಹೇಳಿದರು. ಸುದ್ದಿಗಾರರ ಜೊತೆ ಮಾತನಾಡಿದ ಅವರು, ಎಲ್ಲವನ್ನೂ ಹೈಕಮಾಂಡ್ ತೀರ್ಮಾನ ಮಾಡಲಿದೆ. ಮುಖ್ಯಮಂತ್ರಿ ಮುಂದುವರಿಯುತ್ತಾರಾ, ಬದಲಾಗುತ್ತಾರಾ ಎನ್ನುವುದನ್ನು ಅವರೇ ತಿಳಿಸುತ್ತಾರೆ ಎಂದರು.

# ಕಮ್‌ಬ್ಯಾಕ್ ಟೂರ್ನಮೆಂಟ್‌ನಲ್ಲಿ ಸ್ಪರ್ಧಿಸದಂತೆ ವಿನೇಶ್ ಫೋಗಟ್‌ಗೆ ನಿಷೇಧ

• ಪ್ರಜೋದಯ ವರದಿ

**ನವದೆಹಲಿ:** ಗೊಂಡಾದಲ್ಲಿ ಮೇ 12 ರವರೆಗೆ ನಡೆಯಲಿರುವ ರಾಷ್ಟ್ರೀಯ ಓಪನ್ ರ್‍ಯಾಂಕಿಂಗ್ ಟೂರ್ನಮೆಂಟ್‌ನಲ್ಲಿ ಸ್ಪರ್ಧಿಸದಂತೆ ಭಾರತೀಯ ಕುಸ್ತಿ ಒಕ್ಕೂಟ, ಖ್ಯಾತ ಕುಸ್ತಿ ಪಟು ವಿನೇಶ್ ಫೋಗಟ್ ಅವರನ್ನು ನಿಷೇಧಿಸಿದೆ.

100 ಗ್ರಾಂ ಅಧಿಕ ತೂಕದಿಂದಾಗಿ 2024ರ ಪ್ಯಾರಿಸ್ ಒಲಿಂಪಿಕ್ಸ್ ನಲ್ಲಿ ಪದಕ ವಂಚಿತರಾಗಿದ್ದ ವಿನೇಶ್ ಫೋಗಟ್ ಅವರು ಈ ಸ್ಪರ್ಧೆಯ ಮೂಲಕ ಅಧಿಕೃತವಾಗಿ ಪುನರಾಗಮನವಾಗಬೇಕಿತ್ತು. ಆದರೆ, ನಿಷೇಧ ಅವರಿಗೆ ಮತ್ತೊಂದು ಆಘಾತ ನೀಡಿದೆ. ಶನಿವಾರ ಭಾರತೀಯ ಕುಸ್ತಿ ಒಕ್ಕೂಟ () ವಿನೇಶ್ ಫೋಗಟ್ ಅವರಿಗೆ ಶೋಕಾಸ್ ನೋಟಿಸ್ ಜಾರಿ ಮಾಡಿದ್ದು, ಅವರ ವಿರುದ್ಧ ಅಶಿಸ್ತು ಮತ್ತು ಡೋಪಿಂಗ್ ವಿರೋಧಿ ನಿಯಮ ಉಲ್ಲಂಘನೆ ಆರೋಪ ಹೊರಿಸಿ, ಜೂನ್ 26, 2026 ರವರೆಗೆ ದೇಶೀಯ ಸ್ಪರ್ಧೆಗಳಲ್ಲಿ ಸ್ಪರ್ಧಿಸಲು ಅವರು ಅನರ್ಹರೆಂದು ಘೋಷಿಸಿದೆ.

ಡೋಪಿಂಗ್ ವಿರೋಧಿ ನಿಯಮಗಳ ಅಡಿಯಲ್ಲಿ ನಿವೃತ್ತಿಯಿಂದ ಹಿಂದಿರುಗುವ ಕ್ರೀಡಾಪಟುಗಳಿಗೆ ಅಗತ್ಯವಿರುವ ಕಡ್ಡಾಯ ಆರು ತಿಂಗಳ ನೋಟಿಸ್ ಅವಧಿಯನ್ನು ಪೂರ್ಣಗೊಳಿಸಲು ವಿನೇಶ್ ಫೋಗಟ್ ವಿಫಲರಾಗಿದ್ದಾರೆಂದು ಭಾರತೀಯ ಕುಸ್ತಿ ಒಕ್ಕೂಟ ಹೇಳಿದೆ.

15 ಪುಟಗಳ ನೋಟಿಸ್‌ನಲ್ಲಿ, ವಿನೇಶ್ ಅವರ ನಡವಳಿಕೆಯು ರಾಷ್ಟ್ರೀಯ ಮುಜುಗರವನ್ನುಂಟು ಮಾಡಿದೆ. ಭಾರತೀಯ ಕುಸ್ತಿಯ ಪ್ರತಿಷ್ಠೆಗೆ ಹಾನಿ ಮಾಡಿದೆ ಮತ್ತು ಸಂವಿಧಾನ, ಅಂತರಾಷ್ಟ್ರೀಯ ಕುಸ್ತಿ ನಿಯಮಗಳು ಮತ್ತು ಡೋಪಿಂಗ್ ವಿರೋಧಿ ನಿಯಮಗಳ ನಿಬಂಧನೆಗಳನ್ನು ಉಲ್ಲಂಘಿಸಿದೆ ಎಂದು ಆರೋಪಿಸಿದೆ.



ವಿನೇಶ್ ಅವರು 2024ರ ಒಲಿಂಪಿಕ್ಸ್‌ನ ಫೈನಲ್ ತಲುಪುವ ಮೂಲಕ ಪದಕವನ್ನು ಬಹುತೇಕ ಖಚಿತಪಡಿಸಿಕೊಂಡಿದ್ದರು. ಆದಾಗ್ಯೂ, 50 ಕೆಜಿ ವಿಭಾಗದಲ್ಲಿ ಫೈನಲ್ ಪಂದ್ಯದ ವೇಳೆ ಅವರು 100 ಗ್ರಾಂ ಅಧಿಕ ತೂಕ ಹೊಂದಿರುವುದು ಕಂಡು ಬಂದಿತು, ಇದರ ಪರಿಣಾಮವಾಗಿ ಅವರು ಅನರ್ಹರಾದರು ಮತ್ತು ಪದಕವನ್ನು ಕಳೆದುಕೊಂಡರು. ಇದರ ನಂತರ, ವಿನೇಶ್ ನಿವೃತ್ತಿಯನ್ನು ಪರಿಗಣಿಸಿದ್ದರು, ಆದರೆ, ಅವರು ಯೂ-ಟರ್ನ್ ತೆಗೆದುಕೊಂಡು ಮತ್ತೆ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸುವ ಬಯಕೆಯನ್ನು ವ್ಯಕ್ತಪಡಿಸಿದರು.

# ವಿಜಯ್ ತಮಿಳುನಾಡಿನ ನೂತನ ಮುಖ್ಯಮಂತ್ರಿ


## ದಶಕಗಳ ಡಿಎಂಕೆ-ಎಐಎಡಿಎಂಕೆ ಪಕ್ಷಗಳ ದ್ವಿಪಕ್ಷೀಯ ಪ್ರಭುತ್ವ ಅಂತ್ಯ

• ಪ್ರಜೋದಯ ವರದಿ

**ನವದೆಹಲಿ:** ತಮಿಳುನಾಡಿನ ರಾಜಕೀಯ ಇತಿಹಾಸದಲ್ಲಿ ದಶಕಗಳ ಕಾಲ ಆಳಿದ್ದ ಡಿಎಂಕೆ ಮತ್ತು ಎಐಎಡಿಎಂಕೆ ಪಕ್ಷಗಳ ದ್ವಿಪಕ್ಷೀಯ ಪ್ರಭುತ್ವವನ್ನು ಅಂತ್ಯಗೊಳಿಸಿ, ನಟ ವಿಜಯ್ ಭಾನುವಾರ ತಮಿಳುನಾಡಿನ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದರು.

ಚೆನ್ನೈನ ನೆಹರು ಕ್ರೀಡಾಂಗಣದಲ್ಲಿ ಅಭಿಮಾನಿಗಳು ಮತ್ತು ಬೆಂಬಲಿಗರ ಸಮ್ಮುಖದಲ್ಲಿ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಅವರು ವಿಜಯ್ ಅವರಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಈ ಐತಿಹಾಸಿಕ ಕ್ಷಣಕ್ಕೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ನಟಿ ತ್ರಿಶಾ ಸೇರಿ ಹಲವು ಗಣ್ಯರು ಸಾಕ್ಷಿಯಾದರು. ಎಂಜಿಆರ್, ಕರುಣಾನಿಧಿ ಮತ್ತು ಜಯಲಲಿತಾರಂತಹ ದಿಗ್ಗಜರು ಆಳಿದ ನೆಲದಲ್ಲಿ ಈಗ ವಿಜಯ್ ಅವರ ಆಡಳಿತ ಶುರುವಾಗಿದೆ. ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿರುವ ವಿಜಯ್ ಅವರು ಮೇ 13ರೊಳಗೆ ವಿಧಾನಸಭೆಯಲ್ಲಿ ವಿಶ್ವಾಸ ಮತ ಯಾಚಿಸಲಿದ್ದಾರೆ.

ವಿಜಯ್ ಅವರು ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷವನ್ನು ಕಟ್ಟಿ, ಹಳೆ ಮದ್ರಾಸ್‌ನ ರಾಜಕೀಯ ಸಂಪ್ರದಾಯಗಳನ್ನು ಭೇದಿಸು ಮೂಲಕ 2026ರ ಚುನಾವಣೆಯಲ್ಲಿ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದ ನಂತರವೂ ಅಧಿಕಾರ ಹಿಡಿಯಲು ಹಲವು ರಾಜಕೀಯ ಅಡೆತಡೆಗಳನ್ನು ಎದುರಿಸಿ,



### 200 ಯೂನಿಟ್ ಉಚಿತ ವಿದ್ಯುತ್ ಘೋಷಣೆ

ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ವಿಜಯ್ ಅವರು ಅಧಿಕಾರ ವಹಿಸಿಕೊಳ್ಳುತ್ತಿದ್ದಂತೆಯೇ ರಾಜ್ಯದ ಜನತೆಗೆ ಭರ್ಜರಿ ಕೊಡುಗೆ ಯೊಂದನ್ನು ಘೋಷಿಸಿ ದ್ದಾರೆ. ಗೃಹ ವಿದ್ಯುತ್ ಗ್ರಾಹಕರ ಹಿತದೃಷ್ಟಿಯಿಂದ ಎರಡು ತಿಂಗಳಿಗೆ 200 ಯೂನಿಟ್‌ಗಳವರೆಗೆ ಉಚಿತ ವಿದ್ಯುತ್ ನೀಡುವ ಮಹತ್ವದ ಯೋಜನೆಗೆ ಚಾಲನೆ ನೀಡಲಾಗಿದ್ದು, ಸಾರ್ವಜನಿಕರ ಸಮ್ಮುಖದಲ್ಲೇ ಈ ಐತಿಹಾಸಿಕ ಆದೇಶಕ್ಕೆ ವಿಜಯ್ ಮೊದಲ ಸಹಿ ಹಾಕಿದ್ದಾರೆ.

ಅಧಿಕಾರ ಸ್ವೀಕಾರ ಮಾಡಿದ್ದಾರೆ. ಏಳು ದಶಕಗಳಿಂದ ತಮಿಳುನಾಡನ್ನು ಆಳುತ್ತಿದ್ದ ಡಿಎಂಕೆ ಮತ್ತು ಎಐಎಡಿಎಂಕೆ ಎಂಬ 2 ಬಲಿಷ್ಠ ದ್ರಾವಿಡ ಪಕ್ಷಗಳ ಎದುರು ಚುನಾವಣಾ ಕಣಕ್ಕೆ ಇಳಿದ ವಿಜಯ್, ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದಾರೆ. ಒಟ್ಟು 234 ಕ್ಷೇತ್ರಗಳ ಪೈಕಿ ಬಹುಮತಕ್ಕೆ ಬೇಕಾದ 118ರ ಗಡಿ ದಾಟಲು ವಿಜಯ್ ಹೋರಾಡಬೇಕಾಗಿತ್ತು.

**ನೂತನ ಸಚಿವ ಸಂಪುಟ**

ವಿಜಯ್ ಅವರೊಂದಿಗೆ ಒಂಬತ್ತು ಮಂದಿ ಶಾಸಕರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು. ಎಸ್. ಕೀರ್ತನಾ, ಕೆ.ಎ. ಸೆಂಗೊಟ್ಟೈಯನ್, ಆಧವ್ ಅರ್ಜುನ್, ಬಸ್ಸಿ ಆನಂದ್, ಡಾ.ಅರುಣ್ ರಾಜ್, ವೆಂಕಟರಮಣನ್, ನಿರ್ಮಲ್ ಕುಮಾರ್, ರಾಜ್ ಮೋಹನ್, ಡಾ.ಟಿ.ಕೆ. ಪ್ರಭು ಅವರು ವಿಜಯ್ ಅವರು ಸಂಪುಟ ಸೇರಿದ್ದಾರೆ.

**ಡಿಸಿಎಂ ಗೊಂದಲಕ್ಕೆ ತೆರೆ**

ಟಿವಿಕೆ ಸರ್ಕಾರ ರಚನೆಯಾಗುವ ಸಂದರ್ಭದಲ್ಲಿ ಉಪಮುಖ್ಯಮಂತ್ರಿ ಹುದ್ದೆಯ ಕುರಿತು ತೀವ್ರ ಚರ್ಚೆಗಳು ನಡೆದಿದ್ದವು. ಮೈತ್ರಿ ಪಕ್ಷವಾದ ಕಾಂಗ್ರೆಸ್ ಸೇರಿ ಹಲವು ನಾಯಕರು ಡಿಸಿಎಂ ಹುದ್ದೆಗಾಗಿ ಬೇಡಿಕೆ ಇಟ್ಟಿದ್ದರೆಂಬ ಸುದ್ದಿಗಳು ಹರಿದಾಡಿದ್ದವು. ಆದರೆ, ಭಾನುವಾರ ನಡೆದ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ಕೇವಲ ಮುಖ್ಯಮಂತ್ರಿ ಮತ್ತು ಒಂಬತ್ತು ಸಚಿವರು ಮಾತ್ರ ಪ್ರಮಾಣವಚನ ಸ್ವೀಕರಿಸುವ ಮೂಲಕ ಈ ಎಲ್ಲಾ ವದಂತಿಗಳಿಗೆ ವಿಜಯ್ ಪೂರ್ಣವಿರಾಮ ಹಾಕಿದ್ದಾರೆ.

## ಹಳೆಯ ವಾಣಿಜ್ಯ ಮಳಿಗೆಗಳಿಂದ ಸಾರ್ವಜನಿಕರಿಗೆ ಜೀವಭಯ: ತೆರವುಗೊಳಿಸಲು ಆಗ್ರಹ

# ಸಾವು ಕಂಡರೂ ಎಚ್ಚರವಾಗದ ಆಡಳಿತ ವ್ಯವಸ್ಥೆ

• ಪ್ರಜೋದಯ ವರದಿ

**ಬೇಲೂರು :** ಪಟ್ಟಣದ ಚನ್ನಕೇಶವಸ್ವಾಮಿ ದೇವಾಲಯಕ್ಕೆ ಆಗಮಿಸುವ ಪ್ರವಾಸಿಗರಿಗೆ ಸ್ವಾಗತ ಕೋರಬೇಕಾದ ಪಟ್ಟಣದ ಪ್ರವೇಶ ಭಾಗವೇ ಇದೀಗ ಭೀತಿಯ ವಾತಾವರಣ ಸೃಷ್ಟಿಸುತ್ತಿದೆ. ಬಸ್ ನಿಲ್ದಾಣ ಸಮೀಪ ಹಾಗು ದೇವಾಲಯದ ರಸ್ತೆಬದಿಯಲ್ಲಿರುವ ಪುರಸಭೆಯ ಹಳೆಯ ವಾಣಿಜ್ಯ ಮಳಿಗೆಗಳು ಶಿಥಿಲಾವಸ್ಥೆಗೆ ತಲುಪಿದ್ದು, ಸಾರ್ವಜನಿಕರ ಜೀವಕ್ಕೂ ಅಪಾಯಕಾರಿಯಾಗಿ ಪರಿಣಮಿಸಿವೆ.

ವರ್ಷದ ಹಿಂದೆಯಷ್ಟೇ ಹಿಂದೆ ಇದೇ ಭಾಗದಲ್ಲಿ ಹಳೆಯ ಕಟ್ಟಡದ ಸಜ್ಜಾ ಕುಸಿದು ಮೂವರು ಮೃತಪಟ್ಟ ದುರ್ಘಟನೆ ನಡೆದಿತ್ತು. ದಿನನಿತ್ಯದ ಜೀವನ ಸಾಗಿಸಲು ಮಳಿಗೆಯ ಮುಂಭಾಗದಲ್ಲಿ ವ್ಯಾಪಾರ ಮಾಡುತ್ತಿದ್ದವರು ಹಾಗು ವಸ್ತು ಖರೀದಿಸುತ್ತಿದ್ದವರ ಮೇಲೆ ಏಕಾಏಕಿ ಸಜ್ಜಾ ಕುಸಿದು ಬಿದ್ದ ಪರಿಣಾಮ ಅಮಾಯಕರು ಪ್ರಾಣ ಕಳೆದುಕೊಂಡಿದ್ದರು. ಆ ದುರಂತದ ನೋವು ಇನ್ನೂ ಮಾಸುವ ಮುನ್ನವೇ ಕಟ್ಟಡಗಳು ಮತ್ತೆ ಅಪಾಯದ ಅಂಚಿನಲ್ಲಿ ನಿಂತಿದೆ.

ಘಟನೆ ನಡೆದ ಬಳಿಕ ಕಟ್ಟಡವನ್ನು ಸಂಪೂರ್ಣ ತೆರವುಗೊಳಿಸುವ ಅಥವಾ ಸುರಕ್ಷತಾ ಕ್ರಮ ಕೈಗೊಳ್ಳುವ ನಿರೀಕ್ಷೆ ಸಾರ್ವಜನಿಕರಲ್ಲಿ ಮೂಡಿತ್ತು. ಆದರೆ, ವರ್ಷ ಕಳೆದರೂ ಶಾಶ್ವತ ಕ್ರಮ ಜರುಗಿಲ್ಲ. ಕಟ್ಟಡ ಇನ್ನಷ್ಟು ಶಿಥಿಲಗೊಂಡಿದ್ದರೂ, ಅದರ ಮುಂಭಾಗದಲ್ಲೇ ಇಂದಿಗೂ ಫುಟ್‌ಪಾತ್ ವ್ಯಾಪಾರ ಮುಂದುವರಿದಿದೆ. ಬದುಕಿಗಾಗಿ ಜೀವಭಯದ ನಡುವೆಯೇ ಅಲ್ಪ ಆದಾಯಕ್ಕೆ ದುಡಿಯುತ್ತಿರುವ ಬಡ ವ್ಯಾಪಾರಿಗಳ ಪರಿಸ್ಥಿತಿ ತ್ರಿಶಂಕು ಸ್ಥಿತಿಯಲ್ಲಿದೆ.



ದುರ್ಘಟನೆಯಲ್ಲಿ ಮೃತಪಟ್ಟವರ ಕುಟುಂಬಗಳಿಗೆ ಇನ್ನೂ ಸಮರ್ಪಕ ಪರಿಹಾರ ದೊರಕಿಲ್ಲವೆಂಬ ಆರೋಪವೂ ಕೇಳಿ ಬರುತ್ತಿದೆ. ಮಳಿಗೆ ಮಾಲೀಕರೊಂದಿಗೆ ಅಧಿಕೃತ ಕರಾರು ಇಲ್ಲದಿರುವುದು ಹಾಗು ಪುರಸಭೆಯ ಅನುಮತಿ ಪಡೆಯದೆ ವ್ಯಾಪಾರ ನಡೆಸಲಾಗುತ್ತಿತ್ತು ಎಂಬ ಕಾರಣಗಳಿಂದ ಪರಿಹಾರ ಪ್ರಕ್ರಿಯೆ ಸಂಕೀರ್ಣಗೊಂಡಿದೆ ಎನ್ನಲಾಗುತ್ತಿದೆ. ಆದರೆ, ಕಾನೂನು ಗೊಂದಲಗಳ ಮಧ್ಯೆ ಮೃತರ ಕುಟುಂಬಗಳು ನ್ಯಾಯದಿಂದ ವಂಚಿತವಾಗಿವೆ.

**ಸ್ಥಳೀಯರ ಆಕ್ರೋಶ**

ಪ್ರವಾಸಿಗರಿಗೆ ಸ್ವಾಗತ ಕೋರಬೇಕಾದ ಈ ಕಟ್ಟಡಗಳು ಈಗ ಭಯ ಹುಟ್ಟಿಸು ವಂತಿವೆ. ಇದು ಬೇಲೂರಿನ ಗೌರವಕ್ಕೆ ಧಕ್ಕೆ ತರುತ್ತಿದೆ. ಇಲ್ಲಿಗೆ ಬರುವ ಪ್ರವಾಸಿಗರು ಪಟ್ಟಣದ ಬಗ್ಗೆ ತಪ್ಪು ಕಲ್ಪನೆ ಮಾಡಿಕೊಂಡು ಹೋಗುತ್ತಿದ್ದಾರೆಂದು ಸ್ಥಳೀಯರ ಆಕ್ರೋಶ ವ್ಯಕ್ತಪಡಿಸಿದರು.

ಅಭಿವೃದ್ಧಿ ಎಂಬ ಹೆಸರಿನಲ್ಲಿ ಘೋಷಣೆಗಳು ಕೇಳಿಸುತ್ತಿವೆ. ಆದರೆ, ನೆಲಮಟ್ಟದಲ್ಲಿ ಯಾವುದೇ ಬದಲಾವಣೆ ಕಾಣುತ್ತಿಲ್ಲ. ಸಾವು ಸಂಭವಿಸಿದ ನಂತರ ಸಾಂತ್ವನ ಹೇಳುವುದಕ್ಕಿಂತ ಮುಂಚಿತವಾಗಿ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವುದು ಮುಖ್ಯ. ಈ ಅಪಾಯಕಾರಿ ಕಟ್ಟಡವನ್ನು ತಕ್ಷಣ ತೆರವುಗೊಳಿಸುವುದೇ ನಿಜವಾದ ಅಭಿವೃದ್ಧಿಯ ಸಂಕೇತವೆಂದು ಹಲವರ ಅಭಿಪ್ರಾಯವಾಗಿದೆ.

ಈ ಹಿನ್ನಲೆ ತಾಲ್ಲೂಕು ಆಡಳಿತ, ಪುರಸಭೆ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ತಕ್ಷಣ ಮಧ್ಯಪ್ರವೇಶಿಸಿ ಕಟ್ಟಡ ಮಾಲೀಕರಿಗೆ ನೋಟೀಸ್ ನೀಡಿ ಅಪಾಯಕಾರಿ ಕಟ್ಟಡವನ್ನು ಶೀಘ್ರ ತೆರವುಗೊಳಿಸಬೇಕೆಂಬ ಒತ್ತಾಯ ಸಾರ್ವ ಜನಿಕ ವಲಯದಿಂದ ಕೇಳಿಬರುತ್ತಿದೆ. ಸಾರ್ವಜನಿಕರ ಸುರಕ್ಷತೆಗೆ ಮೊದಲ ಆದ್ಯತೆ ನೀಡಬೇಕೆಂಬುದು ಸ್ಥಳೀಯರ ಆಗ್ರಹವಾಗಿದೆ.

### ದುರಂತಕ್ಕೂ ಮುನ್ನವೇ ಎಚ್ಚೆತ್ತುಕೊಳ್ಳಿ

ವಿಶ್ವಪ್ರಸಿದ್ಧ ಪ್ರವಾಸಿ ತಾಣವಾದ ಬೇಲೂರಿನಲ್ಲಿ ಇಂತಹ ಅಪಾಯಕಾರಿ ಕಟ್ಟಡಗಳು ಇನ್ನೂ ಉಳಿದಿರುವುದು ಆಡಳಿತದ ನಿರ್ಲಕ್ಷ್ಯವನ್ನೇ ತೋರಿಸುತ್ತಿದ್ದು, ಮತ್ತೊಂದು ದುರಂತ ಸಂಭವಿಸುವ ಮುನ್ನವೇ ಸಂಬಂಧಿತ ಅಧಿಕಾರಿಗಳು ಎಚ್ಚೆತ್ತುಕೊಳ್ಳಬೇಕಿದೆ.

# ಪೆಟ್ರೋಲಿಯಂ ಉತ್ಪನ್ನಗಳ ಮಿತಬಳಕೆ ಈಗಿನ ಅಗತ್ಯ: ಮೋದಿ

• ಪ್ರಜೋದಯ ವರದಿ

**ಹೈದರಾಬಾದ್:** ಪಶ್ಚಿಮ ಏಷ್ಯಾ ಸಂಘರ್ಷದಿಂದಾಗಿ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಬಗ್ಗೆ ಹೆಚ್ಚುತ್ತಿರುವ ಕಳವಳಗಳ ನಡುವೆ, ಪ್ರಧಾನಿ ನರೇಂದ್ರ ಮೋದಿ ಜನರು ಪೆಟ್ರೋಲಿಯಂ ಉತ್ಪನ್ನಗಳನ್ನು ಸಂಯಮದಿಂದ ಬಳಸುವಂತೆ ಕರೆ ನೀಡಿದ್ದಾರೆ. ಇದು ಈ ಕ್ಷಣದಿಂದ ಅಗತ್ಯವಾಗಿದೆ ಎಂದು ಒತ್ತಿ ಹೇಳಿದರು.

ಹೈದರಾಬಾದ್‌ನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ನಾವು ಆಮದು ಮಾಡಿಕೊಂಡ ಪೆಟ್ರೋಲಿಯಂ ಉತ್ಪನ್ನಗಳನ್ನು ಅಗತ್ಯಕ್ಕೆ ತಕ್ಕಂತೆ ಮಾತ್ರ ಬಳಸ ಬೇಕಾಗಿದೆ. ಇದು ವಿದೇಶಿ ವಿನಿಮಯವನ್ನು ಉಳಿಸುವುದಲ್ಲದೆ ಯುದ್ಧದ ಪ್ರತಿಕೂಲ ಪರಿಣಾಮವನ್ನು ಕಡಿಮೆ ಮಾಡುತ್ತದೆಂದು ಹೇಳಿದರು.

ಕಳೆದ ಕೆಲವು ವರ್ಷಗಳಿಂದ, ಸೌರಶಕ್ತಿಯ ವಿಷಯದಲ್ಲಿ ಭಾರತ ವಿಶ್ವದ ಅಗ್ರ ರಾಷ್ಟ್ರಗಳಲ್ಲಿ ಒಂದು ಸ್ಥಾನವನ್ನು ತಲುಪಿದೆ ಎಂದು ಗಮನಿಸಿದ ಅವರು, ಪೆಟ್ರೋಲ್‌ನಲ್ಲಿ ಎಥೆನಾಲ್ ಮಿಶ್ರಣ ಮಾಡುವಲ್ಲಿ ಅಭೂತಪೂರ್ವ ಕೆಲಸ ಮಾಡಲಾಗಿದೆಂದು ತಿಳಿಸಿದ್ದಾರೆ.

ಮೊದಲನೆಯದಾಗಿ ಸರ್ಕಾರ 100 ಪ್ರತಿಶತ ವ್ಯಾಪ್ತಿಯನ್ನು ಕೇಂದ್ರೀಕರಿಸಿದೆ ಮತ್ತು ಈಗ, ಅದು ಆರ್ಥಿಕವಾಗಿ ಪೈಪ್ಡ್ ಗ್ಯಾಸ್ ಪೂರೈಕೆಯ ಮೇಲೆ ಕೇಂದ್ರೀಕರಿಸಿದೆ. ಸರ್ಕಾರ ಸಿಎನ್‌ಜಿ ಆಧಾರಿತ ವ್ಯವಸ್ಥೆಯನ್ನು ಸಹ ಉತ್ತೇಜಿಸುತ್ತಿದೆ. ಈ ಪ್ರಯತ್ನಗಳಿಂದಾಗಿ ಭಾರತ ವಿಶ್ವದ ಪ್ರಮುಖ ಇಂಧನ ಬಿಕ್ಕಟ್ಟನ್ನು ಎದುರಿಸುತ್ತಿದೆಂದು ಹೇಳಿದರು.

# ಅಗ್ನಿ-5 ಕ್ಷಿಪಣಿ ಉಡಾವಣೆ ಯಶಸ್ವಿ

• ಪ್ರಜೋದಯ ವರದಿ

**ಒಡಿಶಾ :** ಭಾರತದ ರಕ್ಷಣಾ ಕ್ಷೇತ್ರದಲ್ಲಿ ಮತ್ತೊಂದು ಐತಿಹಾಸಿಕ ಮೈಲಿಗಲ್ಲು ಸ್ಥಾಪನೆಯಾಗಿದೆ. ಒಂದೇ ಕ್ಷಿಪಣಿಯ ಮೂಲಕ ಏಕಕಾಲದಲ್ಲಿ ಶತ್ರುಗಳ ಹತ್ತಾರು ಗುರಿಗಳನ್ನು ಧ್ವಂಸಗೊಳಿಸ ಬಲ್ಲ ಅತ್ಯಾಧುನಿಕ ಅಗ್ನಿ-5 ಕ್ಷಿಪಣಿಯ ಯಶಸ್ವಿ ಉಡಾವಣೆ ಯನ್ನು ಭಾರತ ನಡೆಸಿದೆ. ಎಂ.ಐ. ಆರ್.ವಿ ತಂತ್ರಜ್ಞಾನ ಹೊಂದಿರುವ ಈ ಕ್ಷಿಪಣಿಯು ಭಾರತದ ಪರಮಾಣು ಬಲಕ್ಕೆ ಆನೆಬಲ ನೀಡಿದೆ.

ಒಡಿಶಾದ ಡಾ. ಎಪಿಜೆ ಅಬ್ದುಲ್ ಕಲಾಂ ದ್ವೀಪದಿಂದ ಈ ಪರೀಕ್ಷೆ ನಡೆಸಲಾಗಿದ್ದು, ಸ್ವದೇಶಿ ನಿರ್ಮಿತ ಈ ಕ್ಷಿಪಣಿಯು ನಿಗದಿತ



ಗುರಿಗಳನ್ನು ನಿಖರವಾಗಿ ತಲುಪಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಇದು ಕೇವಲ ಒಂದೇ ಸಿಡಿತಲೆ ಬದಲಿಗೆ, ಹಲವು ಪರಮಾಣು ಸಿಡಿತಲೆಗಳನ್ನು ಹೊತ್ತೊಯ್ಯುವ ಸಾಮರ್ಥ್ಯ ಹೊಂದಿದ್ದು, ನೂರಾರು ಕಿಲೋಮೀಟರ್ ವ್ಯಾಪ್ತಿ ಯಲ್ಲಿ ಹರಡಿರುವ ಶತ್ರು ನೆಲೆಗಳನ್ನು ಏಕಕಾಲದಲ್ಲಿ ನಾಶಪಡಿಸಬಲ್ಲದು.

ಈ ಯಶಸ್ಸಿನೊಂದಿಗೆ ಭಾರತವು ಅಮೇರಿಕಾ, ರಷ್ಯಾ, ಚೀನಾ, ಫ್ರಾನ್ಸ್ ಮತ್ತು ಬ್ರಿಟನ್ ಒಳಗೊಂಡಿರುವ ಅತ್ಯಾಧುನಿಕ ಕ್ಷಿಪಣಿ ತಂತ್ರಜ್ಞಾನ ಹೊಂದಿದ ದೇಶಗಳ ಪಟ್ಟಿಗೆ ಅಧಿಕೃತವಾಗಿ ಸೇರ್ಪಡೆಗೊಂಡಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಈ ಯೋಜನೆಗೆ ಮಿಷನ್ ದಿವ್ಯಾಸ್ತ್ರ ಎಂದು ನಾಮಕರಣ ಮಾಡಿದ್ದರು.

**ಕ್ಷಿಪಣಿಯ ವಿಶೇಷತೆಗಳು**

ವ್ಯಾಪ್ತಿ: 5,000 ಕಿಲೋ ಮೀಟರ್ ಗಿಂತಲೂ ಅಧಿಕ ದೂರದ ಗುರಿ ತಲುಪುವ ಸಾಮರ್ಥ್ಯ. ತಂತ್ರಜ್ಞಾನ: ಎಂ.ಐ.ಆರ್.ವಿ ಮೂರು ಹಂತದ ಘನ ಇಂಧನ ಎಂಜಿನ್ ಬಳಕೆ. ತಜ್ಞರ ಪ್ರಕಾರ ಈ ಕ್ಷಿಪಣಿಯು 4 ರಿಂದ 5 ಪರಮಾಣು ವಾರ್‌ಹೆಡ್‌ಗಳನ್ನು ಹೊತ್ತೊಯ್ಯಬಲ್ಲದು. ಸಂಪೂರ್ಣ ವಾಗಿ ಭಾರತೀಯ ಏವಿಯಾನಿಕ್ಸ್ ಮತ್ತು ಸೆನ್ಸರ್ ಪ್ಯಾಕೇಜ್‌ಗಳನ್ನು ಒಳ ಗೊಂಡಿದೆ. ದೇಶದ ರಕ್ಷಣಾ ಸನ್ನದ್ಧತೆ ಯನ್ನು ಹೆಚ್ಚಿಸುವಲ್ಲಿ ಇದು ಅದ್ಭುತ ಶಕ್ತಿಯಾಗಿದೆ. ಹೆಚ್ಚುತ್ತಿರುವ ಜಾಗತಿಕ ಸವಾಲುಗಳ ನಡುವೆ ಭಾರತಕ್ಕೆ ಈ ತಂತ್ರಜ್ಞಾನ ಅನಿವಾರ್ಯವಾಗಿತ್ತು.

ವಿಶೇಷವೆಂದರೆ, ಡಿಆರ್‌ಡಿಒ ವಿಜ್ಞಾನಿಗಳ ಶ್ರಮದ ಫಲವಾಗಿರುವ ಈ ಯೋಜನೆಯ ನೇತೃತ್ವವನ್ನು ಮಹಿಳಾ ವಿಜ್ಞಾನಿಯೊಬ್ಬರು ವಹಿಸಿದ್ದರು. ತಂಡದಲ್ಲಿದ್ದ ಹಲವು ಮಹಿಳಾ ವಿಜ್ಞಾನಿಗಳ ಪಾತ್ರವು ಭಾರತದ ಹೆಮ್ಮೆಯನ್ನು ಇಮ್ಮಡಿಗೊಳಿಸಿದೆ. ಈ ಕ್ಷಿಪಣಿ ಪರೀಕ್ಷೆಯು ಯಶಸ್ವಿಯಾಗಿರುವುದು ಭಾರತವು ಭೂಮಿ, ಆಕಾಶ ಮತ್ತು ನೀರಿನಿಂದ ಪರಮಾಣು ದಾಳಿ ನಡೆಸಬಲ್ಲ ಶಕ್ತಿಯನ್ನು ಇನ್ನಷ್ಟು ಬಲಪಡಿಸಿಕೊಂಡಂತಾಗಿದೆ.

# ಚಂದ್ರಬಾಬು ನಾಯ್ಡು- ಪವನ್ ಕಲ್ಯಾಣ್ ಭೇಟಿಯಾದ ಮೋದಿ

## ರಾಜಕೀಯ ವಲಯದಲ್ಲಿ ಸಂಚಲನ

• ಪ್ರಜೋದಯ ವರದಿ

**ವಿಶಾಖಪಟ್ಟಣಂ:** ಮಹತ್ವದ ಬೆಳವಣಿಗೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಆಂಧ್ರ ಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಮತ್ತು ಡಿಸಿಎಂ ಪವನ್ ಕಲ್ಯಾಣ್ ಅವರ ಮನೆಗೆ ಭಾನುವಾರ ಭೇಟಿ ನೀಡಿ ಚರ್ಚೆ ನಡೆಸಿದ್ದಾರೆ.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಈ ಭೇಟಿ ರಾಜಕೀಯ ವಲಯದಲ್ಲಿ ವ್ಯಾಪಕ ಚರ್ಚೆಗೆ ಕಾರಣವಾಗಿದೆ. ಅಂತೆಯೇ ರಾಜ್ಯದಲ್ಲಿನ ಎನ್‌ಡಿಎ ಮೈತ್ರಿಯ ಬಲವಾದ ಸಮನ್ವಯವನ್ನು ತೋರಿಸಿದೆ. ಆಂಧ್ರಪ್ರದೇಶದಲ್ಲಿ ಬಿಜೆಪಿ, ತೆಲುಗು ದೇಶಂ ಪಕ್ಷ (ಟಿಡಿಪಿ) ಮತ್ತು ಜನಸೇನಾ ಪಕ್ಷ (ಜೆಎಸ್‌ಪಿ) ನಡುವಿನ ಮೈತ್ರಿಯನ್ನು ಮತ್ತಷ್ಟು ಬಲಪಡಿಸುವ ಪ್ರಯತ್ನಗಳ ನಡುವೆಯೇ ಮೋದಿ ಅವರ ಈ ಭೇಟಿ ರಾಜಕೀಯ ಮಹತ್ವ ಪಡೆದುಕೊಂಡಿದೆ.

ಮೊದಲು ಪ್ರಧಾನಮಂತ್ರಿ ಚಂದ್ರಬಾಬು ನಾಯ್ಡು ಅವರ ನಿವಾಸಕ್ಕೆ ಭೇಟಿ ನೀಡಿದ್ದು, ಈ ವೇಳೆ ಇಬ್ಬರು ನಾಯಕರು ರಾಜ್ಯದ ಅಭಿವೃದ್ಧಿ, ಮೂಲಸೌಕರ್ಯ ವಿಸ್ತರಣೆ, ಕೈಗಾರಿಕಾ ಹೂಡಿಕೆಗಳು ಮತ್ತು ಕಲ್ಯಾಣ ಕಾರ್ಯಕ್ರಮಗಳ ಕುರಿತು ಚರ್ಚೆ ನಡೆಸಿದರೆಂದು ತಿಳಿದುಬಂದಿದೆ.

ಸಭೆಯ ಕೆಲವು ಭಾಗಗಳಲ್ಲಿ ಟಿಡಿಪಿ ಮತ್ತು ಬಿಜೆಪಿ ಹಿರಿಯ ನಾಯಕರು ಕೂಡ ಉಪಸ್ಥಿತರಿದ್ದರು. ಈ ವೇಳೆ ಆಂಧ್ರ ಪ್ರದೇಶಕ್ಕೆ ಕೇಂದ್ರದ ನೆರವನ್ನು ವೇಗಗೊಳಿಸುವ ಬಗ್ಗೆ ಚರ್ಚೆ ನಡೆದಿದ್ದು, ಬಂದರುಗಳು, ಹೆದ್ದಾರಿಗಳು, ರೈಲು ಸಂಪರ್ಕ ಮತ್ತು ಅಮರಾವತಿಯನ್ನು ರಾಜ್ಯ ರಾಜಧಾನಿಯಾಗಿ ಅಭಿವೃದ್ಧಿಪಡಿಸುವ ಯೋಜನೆಗಳ ಕುರಿತು ಮಾತುಕತೆ ನಡೆದಿದೆ. ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ನಡುವೆ ಮುಂದಿನ ಹೂಡಿಕೆ ಯೋಜನೆಗಳ ಕುರಿತ ಸಮನ್ವಯದ ವಿಷಯವೂ ಚರ್ಚೆಗೆ ಬಂದಿತ್ತು ಎಂದು ತಿಳಿದುಬಂದಿದೆ.

ಚಂದ್ರಬಾಬು ನಾಯ್ಡು ಅವರನ್ನು ಭೇಟಿಯಾದ ಬಳಿಕ ಮೋದಿ ಅವರು ಉಪ ಮುಖ್ಯಮಂತ್ರಿ ಪವನ್ ಕಲ್ಯಾಣ್ ಅವರ ನಿವಾಸಕ್ಕೆ ತೆರಳಿದರು. ಈ ಭೇಟಿ ಸಾರ್ವಜನಿಕ ಹಾಗೂ ರಾಜಕೀಯ ವಲಯದಲ್ಲಿ ಹೆಚ್ಚಿನ ಗಮನ ಸೆಳೆಯಿತು. ಜನಸೇನಾ ಪಕ್ಷದ ಬೆಂಬಲಿಗರು ಪ್ರಧಾನಮಂತ್ರಿಯನ್ನು ಸ್ವಾಗತಿಸಲು ದೊಡ್ಡ ಸಂಖ್ಯೆಯಲ್ಲಿ ನಿವಾಸದ ಹೊರಭಾಗದಲ್ಲಿ ಸೇರಿದ್ದರು. ಈ ಭೇಟಿಯ ವೇಳೆ ಮೋದಿ ಮತ್ತು ಪವನ್ ಕಲ್ಯಾಣ್ ಯುವಜನರ ಅಭಿವೃದ್ಧಿ, ಉದ್ಯೋಗಾವಕಾಶಗಳು ಮತ್ತು ಗ್ರಾಮೀಣ ಆಡಳಿತ ಬಲಪಡಿಸುವ ವಿಷಯಗಳ ಕುರಿತು ಚರ್ಚೆ ನಡೆಸಿದರು ಎಂದು ತಿಳಿದುಬಂದಿದೆ.

ಭೇಟಿ ವೇಳೆ ರಾಜ್ಯದಲ್ಲಿ ಎನ್‌ಡಿಎ





ಮೈತ್ರಿಯನ್ನು ಬಲಪಡಿಸುವಲ್ಲಿ ಹಾಗೂ ಜನಬೆಂಬಲ ಒಗ್ಗೂಡಿಸುವಲ್ಲಿ ಪವನ್ ಕಲ್ಯಾಣ್ ವಹಿಸಿರುವ ಪಾತ್ರವನ್ನು ಮೋದಿ ಪ್ರಶಂಸಿಸಿದ್ದಾರೆಂದು ಮೂಲಗಳು ತಿಳಿಸಿವೆ.

ಎರಡೂ ಭೇಟಿಗಳ ದೃಶ್ಯಗಳಲ್ಲಿ ನಾಯಕರು ಆತ್ಮೀಯವಾಗಿ ಮಾತುಕತೆ ನಡೆಸುತ್ತಿರುವುದು ಕಂಡುಬಂದಿತು. ಸಾಂಪ್ರದಾಯಿಕ ಆಂಧ್ರ ಆತಿಥ್ಯವನ್ನು ಪ್ರಧಾನಮಂತ್ರಿಗೆ ನೀಡಲಾಯಿತು.

ಪವನ್ ಕಲ್ಯಾಣ್ ನಿವಾಸದಲ್ಲಿ ಕುಟುಂಬ ಸದಸ್ಯರು ಮೋದಿಯನ್ನು ಸ್ವಾಗತಿಸಿದರೆ, ಪಕ್ಷದ ಕಾರ್ಯಕರ್ತರು ಮೈತ್ರಿ ನಾಯಕರ ಪರ ಘೋಷಣೆಗಳನ್ನು ಕೂಗಿದರು. ರಾಜಕೀಯ ವಿಶ್ಲೇಷಕರು, ಚಂದ್ರಬಾಬು ನಾಯ್ಡು ಮತ್ತು ಪವನ್ ಕಲ್ಯಾಣ್ ಅವರ ಮನೆಗಳಿಗೆ ಮೋದಿ ಸ್ವತಃ ಭೇಟಿ ನೀಡಿರುವುದು ಮೈತ್ರಿಯೊಳಗಿನ ವಿಶ್ವಾಸ ಮತ್ತು ಐಕ್ಯತೆಯನ್ನು ಬಲಪಡಿಸುವ ಸಂಕೇತವಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಈ ನಡೆ ದಕ್ಷಿಣ ಭಾರತದಲ್ಲಿ ಬಿಜೆಪಿ ತನ್ನ ವಿಸ್ತರಣಾ ತಂತ್ರಕ್ಕೆ ಆಂಧ್ರ ಪ್ರದೇಶಕ್ಕೆ ನೀಡುತ್ತಿರುವ ಮಹತ್ವವನ್ನೂ ತೋರಿಸುತ್ತದೆ ಎಂದು ಹೇಳಲಾಗುತ್ತಿದೆ.

ರಾಜ್ಯದಲ್ಲಿ ಅಭಿವೃದ್ಧಿ ಯೋಜನೆಗಳ ಉದ್ಘಾಟನೆ ಹಾಗೂ ಸಾರ್ವಜನಿಕ ಸಭೆಗಳಲ್ಲಿ ಭಾಗವಹಿಸಲು ಮೋದಿ ಆಗಮಿಸಿದ್ದ ಸಂದರ್ಭದಲ್ಲಿ ಈ ಭೇಟಿಗಳು ನಡೆದವು. ನಾಯಕರ ನಿವಾಸಗಳ ಸುತ್ತಮುತ್ತ ಭದ್ರತೆಯನ್ನು ಹೆಚ್ಚಿಸಲಾಗಿತ್ತು. ವಿಶೇಷ ರಕ್ಷಣಾ ದಳ () ಸಿಬ್ಬಂದಿ ಹಾಗೂ ರಾಜ್ಯ ಪೊಲೀಸ್ ಪಡೆಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ನಿಯೋಜಿಸಲಾಗಿತ್ತು.

ಇತ್ತೀಚಿನ ಚುನಾವಣೆಯಲ್ಲಿ ಬಿಜೆಪಿ-ಟಿಡಿಪಿ-ಜನಸೇನಾ ಮೈತ್ರಿ ಉತ್ತಮ ಪ್ರದರ್ಶನ ನೀಡಿದ್ದ ಹಿನ್ನೆಲೆ, ಭಾನುವಾರದ ಈ ಭೇಟಿಗಳು ಮೈತ್ರಿ ಪಕ್ಷಗಳ ನಡುವಿನ ಸಹಕಾರವನ್ನು ಇನ್ನಷ್ಟು ಬಲಪಡಿಸುವ ಸಾಧ್ಯತೆ ಇದೆ ಎಂದು ರಾಜಕೀಯ ವಲಯದಲ್ಲಿ ಚರ್ಚೆಯಾಗುತ್ತಿದೆ.

# ಬಿಲ್ಲುಗಾರಿಕೆ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಭಾರತಕ್ಕೆ ಚಿನ್ನ

• ಪ್ರಜೋದಯ ವರದಿ

ಶಾಂಘೈ : ಇಲ್ಲಿ ನಡೆಯುತ್ತಿರುವ ಬಿಲ್ಲುಗಾರಿಕೆ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಭಾರತೀಯ ಮಹಿಳಾ ತಂಡವು ದೀಪಿಕಾ ಕುಮಾರಿ ನೇತೃತ್ವದಲ್ಲಿ ಆತಿಥೇಯ ಚೀನಾವನ್ನು ರೋಚಕ ಶೂಟ್‌ಆಫ್‌ನಲ್ಲಿ ಮಣಿಸಿ ಚಿನ್ನದ ಪದಕ ಗೆದ್ದಿದೆ.

ದೀಪಿಕಾ ಕುಮಾರಿ,ಅಂಕಿತಾ ಭಕತ್ ಮತ್ತು ಯುವ ಪ್ರತಿಭೆ ಕುಂಕುಮ್ ಮೊಹೋದ್ ಒಳಗೊಂಡ ಭಾರತೀಯ ತಂಡವು ಫೈನಲ್‌ನಲ್ಲಿ ಚೀನಾವನ್ನು 5-4 (28-26) ಅಂತರದಲ್ಲಿ ಸೋಲಿಸಿತು. ನಾಲ್ಕು ಸೆಟ್‌ಗಳ ಅಂತ್ಯಕ್ಕೆ ಪಂದ್ಯ 4-4ರಿಂದ ಸಮಬಲಗೊಂಡಿದ್ದರಿಂದ ಶೂಟ್‌ಆಫ್ ಮೂಲಕ ಫಲಿತಾಂಶ ನಿರ್ಧಾರವಾಯಿತು.

ಈ ಗೆಲುವು ಭಾರತಕ್ಕೆ ವಿಶೇಷವಾಗಿದ್ದು, ಸೆಮಿಫೈನಲ್‌ನಲ್ಲಿ 10 ಬಾರಿ ಒಲಿಂಪಿಕ್ ಚಾಂಪಿಯನ್ ಆಗಿರುವ ದಕ್ಷಿಣ ಕೊರಿಯಾವನ್ನು ಸೋಲಿಸಿ ಭಾರತ ಫೈನಲ್‌ಗೆ ಪ್ರವೇಶಿಸಿತ್ತು. 2021ರ ಬಳಿಕ ಮಹಿಳಾ ರಿಕರ್ವ್ ತಂಡಕ್ಕೆ ಇದು ಮೊದಲ ವಿಶ್ವಕಪ್ ಚಿನ್ನದ ಪದಕವಾಗಿದೆ.

2010ರಿಂದಲೇ ವಿಶ್ವಕಪ್‌ನಲ್ಲಿ ಭಾರತದ ಪ್ರಮುಖ ಬಿಲ್ಲುಗಾರ್ತಿಯಾಗಿ ಗುರುತಿಸಿಕೊಂಡಿರುವ ದೀಪಿಕಾ ಕುಮಾರಿ ಇದೀಗ ತಮ ಖಾತೆಗೆ ಏಳನೇ ವಿಶ್ವಕಪ್ ತಂಡ ಚಿನ್ನದ ಪದಕ ಸೇರಿಸಿಕೊಂಡಿದ್ದಾರೆ. 2021ರಲ್ಲಿ ಗ್ವಾಟೆಮಾಲಾ ಸಿಟಿ ಮತ್ತು ಪ್ಯಾರಿಸ್‌ನಲ್ಲಿ ಗೆದ್ದ ತಂಡದಲ್ಲೂ ಅವರು ಭಾಗಿಯಾಗಿದ್ದರು.



ಶಾಂಘೈನಲ್ಲಿ ಭಾರತದ ಪದಕ ಸಂಖ್ಯೆ ಈಗ ಎರಡಕ್ಕೇರಿದೆ. ಇದಕ್ಕೂ ಮುನ್ನ ಕಾಂಪೌಂಡ್ ವಿಭಾಗದಲ್ಲಿ ಕಂಚಿನ ಪದಕ ಗೆದ್ದು ಭಾರತದ ಖಾತೆ ತೆರೆದಿದ್ದರು.ಇನ್ನೊಂದೆಡೆ, ಸಿಮ್ರನ್ ಜೀತ್ ಕೌರ್ ಮಹಿಳಾ ರಿಕರ್ವ್ ವೈಯಕ್ತಿಕ ವಿಭಾಗದ ಸೆಮಿಫೈನಲ್‌ಗೆ ಪ್ರವೇಶಿಸಿದ್ದು, ಜಯ ಸಾಧಿಸಿದರೆ ತಮ್ಮ ಮೊದಲ ವಿಶ್ವಕಪ್ ವೈಯಕ್ತಿಕ ಪದಕ ಖಚಿತಪಡಿಸಿಕೊಳ್ಳಲಿದ್ದಾರೆ.

ಪೂರ್ಣಕಾಲಿಕ ರಾಷ್ಟ್ರೀಯ ಕೋಚ್ ಇಲ್ಲದ ಪರಿಸ್ಥಿತಿಯಲ್ಲೂ ದೀಪಿಕಾ ಕುಮಾರಿ ತಂಡವನ್ನು ಮುನ್ನಡೆಸಿದ ರೀತಿ ಗಮನಸೆಳೆಯಿತು. ಬ್ರೇಕ್‌ಗಳ ವೇಳೆ ಹಾಗೂ ಬದಲಾವಣೆ ಸಂದರ್ಭಗಳಲ್ಲಿ ಅವರು ಸಹ ಆಟಗಾರ್ತಿಯರಿಗೆ ಧೈರ್ಯ ತುಂಬುತ್ತಾ ತಂಡದ ಆತ್ಮವಿಶ್ವಾಸ ಹೆಚ್ಚಿಸಿದರು.

ಫೈನಲ್ ಆರಂಭದಲ್ಲಿ ಭಾರತ ಮೇಲುಗೈ ಸಾಧಿಸಿತು. ಮೊದಲ ಸೆಟ್‌ನಲ್ಲಿ 54-53 ಅಂತರದಿಂದ ಗೆದ್ದ ಭಾರತಕ್ಕೆ ದೀಪಿಕಾ ಅವರ ನಿರಂತರ 10 ಅಂಕಗಳ ಶಾಟ್‌ಗಳು ಬಲವಾಯಿತು. ಆದರೆ ಎರಡನೇ ಸೆಟ್‌ನಲ್ಲಿ ಚೀನಾ ಬಲಿಷ್ಠ ಪ್ರದರ್ಶನ ನೀಡಿ 55-52 ಅಂತರದಿಂದ ಗೆದ್ದು 2-2 ಸಮಬಲ ಸಾಧಿಸಿತು. ಈ ಸೆಟ್‌ನಲ್ಲಿ ದೀಪಿಕಾ ಕೊನೆಯ ಶಾಟ್‌ನಲ್ಲಿ 7 ಅಂಕ ಮಾತ್ರ ಪಡೆದಿದ್ದರು.

ಮೂರನೇ ಸೆಟ್‌ನಲ್ಲಿ ಚೀನಾ 57-56 ಅಂತರದಿಂದ ಗೆದ್ದು 4-2 ಮುನ್ನಡೆ ಪಡೆದಿತು. ನಾಲ್ಕನೇ ಸೆಟ್‌ನಲ್ಲಿ ಭಾರತ 54 ಅಂಕಗಳಿಗೆ ಸೀಮಿತವಾದಾಗ ಚೀನಾಗೆ ಗೆಲುವಿಗೆ ಕೇವಲ ಒಂದು 9 ಅಂಕದ ಶಾಟ್ ಅಗತ್ಯವಿತ್ತು. ಆದರೆ ಯುವ ಆಟಗಾರ್ತಿ ಯು ಕ್ವಿ 8 ಅಂಕ ಮಾತ್ರ ಪಡೆದ ಕಾರಣ ಪಂದ್ಯ ಶೂಟ್‌ಆಫ್‌ಗೆ ತಲುಪಿತು. ನಿರ್ಣಾಯಕ ಕ್ಷಣದಲ್ಲಿ ಭಾರತ ಅದ್ಭುತ ಪ್ರದರ್ಶನ ನೀಡಿತು. ಅಂಕಿತಾ 9, ಕುಂಕುಮ್ 10 ಮತ್ತು ದೀಪಿಕಾ 9 ಅಂಕ ಗಳಿಸಿ ಭಾರತಕ್ಕೆ ಚಿನ್ನದ ಪದಕ ತಂದುಕೊಟ್ಟರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK